ಅಹರ್ನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

ಪಾಕ್ಷಿಕ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ಕೇರಳ: ಪ್ರಾಕೃತಿಕ ವಿಕೋಪದಿಂದ ವಯನಾಡ್‌ನಲ್ಲಿ ಸಂಭವಿಸಿದ ಭೂಕುಸಿತ ದುರಂತದಲ್ಲಿ ಸಿಲುಕಿಕೊಂಡ ಬುಡಕಟ್ಟು ಸಮುದಾಯದ ಮಗುವನ್ನು ರಕ್ಷಿಸಿದ ಅರಣ್ಯ ಇಲಾಖೆಯ ಸಿಬ್ಬಂದಿ.

ಸಂಪುಟ : 46 | ಸಂಚಿಕೆ : 08 | ಶ್ರಾವಣ | ಕಲಿಯುಗಾಬ್ದ 5126 | 15–08–2024 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

## ಶತಾಬ್ದಿಯ ಹೊಸ್ತಿಲಲ್ಲಿ ಆರೆಸ್ಸೆಸ್

# ಸಾಮಾಜಿಕ ಪರಿವರ್ತನೆಗಾಗಿ ಪಂಚಕಾರ್ಯಗಳು

1925ರಲ್ಲಿ ಪ್ರಾರಂಭಗೊಂಡ ರಾಷ್ಟ್ರೀಯ ಸ್ವಯಂಸೇವಕ ಸಂಘವು ತನ್ನ ವಿಶಿಷ್ಟ (Unique) ಕಾರ್ಯಪದ್ಧತಿಯೊಂದಿಗೆ ಹಂತ ಹಂತಗಳಲ್ಲಿ ಬೆಳೆದು ನಿಂತು ಇದೀಗ ಶತಮಾನದ ಹೊಸ್ತಿಲಲ್ಲಿದೆ. ನಾಗಪುರದ ಮಹಲ್ – ಮೊಹಿತೇವಾಡಾದ ಪರಿಸರದಿಂದ ಪ್ರಾರಂಭಗೊಂಡ ಆರೆಸ್ಸೆಸ್, ಕ್ರಮೇಣ ಅಖಿಲ ಭಾರತೀಯ ಸಂಘಟನೆಯಾಗಿ ಬೆಳೆಯುತ್ತಾ ದೇಶಾದ್ಯಂತ ತನ್ನ ಕಾರ್ಯವನ್ನು ವಿಸ್ತರಿಸಿದೆ. ಜಗತ್ತಿನ 53 ದೇಶಗಳಲ್ಲಿ ವಿಶ್ವವಿಭಾಗ – ಹಿಂದೂ ಸ್ವಯಂಸೇವಕ ಸಂಘದ ಶಾಖೆಗಳು ನಡೆಯುತ್ತಿವೆ.

2024 ಜುಲೈನಲ್ಲಿ ರಾಂಚಿಯಲ್ಲಿ ನಡೆದ ಆರೆಸ್ಸೆಸ್ಸಿನ ಅಖಿಲ ಭಾರತೀಯ ಪ್ರಾಂತ ಪ್ರಚಾರಕರ ಬೈಠಕ್‌ನ ಅಂತಿಮ ದಿನದ ಪತ್ರಿಕಾಗೋಷ್ಠಿಯಲ್ಲಿ ಅಖಿಲ ಭಾರತೀಯ ಪ್ರಚಾರ ಪ್ರಮುಖ ಸುನಿಲ್ ಅಂಬೇಕರ್ ನೀಡಿದ ವರದಿಯಂತೆ ದೇಶದಲ್ಲಿ ಪ್ರಸ್ತುತ 73,117 ದೈನಿಕ ಶಾಖೆಗಳು, 27,717 ಸಾಪ್ತಾಹಿಕ ಮಿಲನ್ ಸೇರಿದಂತೆ 1 ಲಕ್ಷಕ್ಕೂ ಹೆಚ್ಚು ಏಕತ್ರೀಕರಣಗಳು (gatherings) ನಿಯಮಿತವಾಗಿ ನಡೆಯುತ್ತಿವೆ. ಸಂಘದ ಶಾಖೆ/ಮಿಲನ್ ಆಗದ ಅಥವಾ ಸಂಘಕಾರ್ಯ ತಲುಪದ 1,58,532 ಹಳ್ಳಿಗಳಿಗೆ ಜಾಗರಣ ಪತ್ರಿಕೆಗಳು ತಲುಪುತ್ತಿವೆ.

ಸಂಘದ ವಿವಿಧ ಕಾರ್ಯವಿಭಾಗಗಳು, 6 ಗತಿವಿಧಿಗಳು, ವನವಾಸಿ ಕಲ್ಯಾಣ, ಭಾರತೀಯ ಕಿಸಾನ್ ಸಂಘ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಸೇರಿದಂತೆ ಹಲವಾರು ವಿವಿಧ ಕ್ಷೇತ್ರ ಸಂಘಟನೆಗಳ ಮೂಲಕ ಸಮಾಜದ ಸಹಭಾಗಿತ್ವದೊಂದಿಗೆ ಕೋಟ್ಯಾಂತರ ಕಾರ್ಯಕರ್ತರು, ಸ್ವಯಂಸೇವಕರು "ವ್ಯಕ್ತಿನಿರ್ಮಾಣದ ಮೂಲಕ ಸಮಾಜ ಪರಿವರ್ತನೆ – ರಾಷ್ಟ್ರದ ಸರ್ವಾಂಗೀಣ ಉನ್ನತಿ"ಯ ಆಶಯದೊಂದಿಗೆ ಸಾಮಾಜಿಕ ಪರಿವರ್ತನೆಯ ಹಾಗೂ ರಾಷ್ಟ್ರನಿರ್ಮಾಣದ ಕಾರ್ಯದಲ್ಲಿ ನಿರತರಾಗಿದ್ದಾರೆ.

ಸಂಘಾವಲೋಕನ ಮಾಡಿದಾಗ ಒಂದೇ ಕಾರ್ಯಪದ್ಧತಿಯ ಮೂಲಕ ಒಂದೇ ಕಾಲಮಾನದಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ, ಮನೆಯಿಂದ ಮನೆಗೆ, ಹೃದಯದಿಂದ ಹೃದಯಕ್ಕೆ (Man to Man, Door to Door, Heart to Heart) ತಲುಪುತ್ತಾ ನಿರಂತರವಾಗಿ ಸಮಾಜ ಜಾಗರಣೆಯ ಮೂಲಕ ಕೋಟ್ಯಾಂತರ ಮಂದಿಯನ್ನು ಒಂದು ಶತಮಾನದ ಅವಧಿಯಲ್ಲಿ ಸಂಘಟಿಸಿರುವ ವೈಶಿಷ್ಟ್ಯಪೂರ್ಣ ಸಂಘಕಾರ್ಯವು ಮಾನವ ನಾಗರಿಕ ಇತಿಹಾಸದ ಮಹತ್ವದ ಮೈಲಿಗಲ್ಲುಗಳಲ್ಲೊಂದು ಎಂದರೆ ಅತಿಶಯೋಕ್ತಿಯಲ್ಲ. ಸಂಘದ ಪ್ರಾರಂಭ, ವಿಕಾಸ, ವರ್ತಮಾನದ ಸ್ಥಿತಿಗತಿಗಳನ್ನು ಗಮನಿಸಿದರೆ ಶತಮಾನ ಕಾಣುತ್ತಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘವು ಒಂದು ಆಂದೋಲನದ ಸ್ವರೂಪದಿಂದ ರಾಷ್ಟ್ರೀಯ ಏಕಾತ್ಮತೆ, ಸಮರಸತೆ, ದೇಶದ ಏಕತೆ–ಅಖಂಡತೆ, ಸೇವೆ, ಸಮರ್ಪಣೆ, ದೇಶಭಕ್ತಿ ಮುಂತಾದ ಕೆಲವು ವಿಷಯಗಳನ್ನು ಸ್ಥಾಪಿತಗೊಳಿಸುವತ್ತ (Movement to Establishment) ಸಾಗುತ್ತಿದೆ.

**ಶತಾಬ್ದಿ ಕಾರ್ಯ:** ಮುಂದಿನ ವರ್ಷ 2025ರ ವಿಜಯದಶಮಿಯಂದು ರಾಷ್ಟ್ರೀಯ ಸ್ವಯಂಸೇವಕ ಸಂಘವು ನೂರು ವರ್ಷಗಳನ್ನು ಪೂರೈಸಲಿದೆ. 2024ರ ಮಾರ್ಚ್‌ನಲ್ಲಿ ನಾಗ್ಪುರದಲ್ಲಿ ನಡೆದ ಅಖಿಲ ಭಾರತೀಯ ಪ್ರತಿನಿಧಿ ಸಭಾದ ಕೊನೆಯ ದಿನದ ಪತ್ರಿಕಾಗೋಷ್ಠಿಯಲ್ಲಿ ಸರಕಾರ್ಯವಾಹರಾದ ದತ್ತಾತ್ರೇಯ ಹೊಸಬಾಳೆಯವರು "ಸಮಾಜ ಮತ್ತು ಸಂಘ ಬೇರೆಯಲ್ಲ. ಇದು ನಮ್ಮ ಕಲ್ಪನೆ. ಏಕೆಂದರೆ ರಾಷ್ಟ್ರೀಯ ಸ್ವಯಂಸೇವಕ ಸಂಘ ಸಮಾಜದೊಳಗಿನ ಒಂದು ಸಂಘಟನೆಯಲ್ಲ ಆದರೆ ಸಂಪೂರ್ಣ ಸಮಾಜವನ್ನು ಸಂಘಟಿಸುವ ಸಂಘಟನೆ. ಸಂಘದ ಸಾಮಾಜಿಕ ಸದ್ಭಾವದ ಕಾರ್ಯದಲ್ಲಿ ಸಮಾಜದ ಎಲ್ಲಾ ವರ್ಗದ ಜನರಿದ್ದಾರೆ. ನಮ್ಮ ಎಲ್ಲಾ ಗತಿವಿಧಿಗಳು ರಾಷ್ಟ್ರೀಯ ಆಂದೋಲನದ ಭಾಗವಾಗಿವೆ. ಸಮಾಜದಲ್ಲಿ ಕುಟುಂಬದೊಳಗಡೆ ಉತ್ತಮ ಮಾತುಕತೆ ಮೂಡುವಂತೆ ಮಾಡಲು, ಪರಿಸರವನ್ನು ರಕ್ಷಿಸುವಲ್ಲಿ, ಸಾಮಾಜಿಕ ಸಮರಸತೆಯನ್ನು ಉಂಟುಮಾಡುವುದು ಯಾವುದೇ ಒಂದು ಸಂಘಟನೆಯ ಕೆಲಸವಲ್ಲ, ಅದು ಇಡೀ ಸಮಾಜದ ಕೆಲಸ. ಹಾಗಾಗಿ ಒಂದು ಸಂಘಟನೆಗಿಂತ ಹೆಚ್ಚಾಗಿ ಸಂಘ ಒಂದು ಅಭಿಯಾನವಾಗಿ ಕಾರ್ಯನಿರ್ವಹಿಸುತ್ತಿದೆ. ಆದ್ದರಿಂದ ಸಂಘದ ನಿತ್ಯಕಾರ್ಯ ಸಂಘಟನೆಯ ಮೂಲಕ ನಡೆಯುತ್ತದೆ ಆದರೆ ಪರಿವರ್ತನೆಯ ಕಾರ್ಯ ಸಮಾಜದ ಮೂಲಕವೇ ನಡೆಯಬೇಕಿದೆ. ಇಂತಹ ಪ್ರಯತ್ನಗಳು ಅದಾಗಲೇ ಸಮಾಜದಲ್ಲಿ ನಡೆಯುತ್ತಿದ್ದು ಆ ಎಲ್ಲಾ ಸಜ್ಜನಶಕ್ತಿಗಳೊಂದಿಗೆ ಸೇರಿ ಸಂಘ ಕೆಲಸ ಮಾಡುತ್ತದೆ. ಸಮಾಜದ ಕೆಲಸಕ್ಕೆ ಅವಶ್ಯಕ ಆಂತರಿಕ ಶಕ್ತಿ ಒದಗಿಸುವುದು ಸಂಘದ ಕೆಲಸ, ಅದನ್ನು ಮಾಡುತ್ತೇವೆ. ಶತಾಬ್ದಿಯ ವರ್ಷದಲ್ಲಿ ಸಮಾಜದ ಕೆಲವು ಆಯಾಮಗಳ ಜೊತೆಗೆ ನಾವು ಮುನ್ನಡೆಯಲಿದ್ದೇವೆ" ಎಂದು ಹೇಳಿದ್ದರು.

ಶತಾಬ್ದಿ ವರ್ಷದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘವು 5 ಮಹತ್ವದ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ. 'ಪಂಚ ಪರಿವರ್ತನೆ' ಎಂದು ಕರೆಯಲ್ಪಡುವ ಸಾಮಾಜಿಕ ಪರಿವರ್ತನೆಯ ಈ 5 ಕಾರ್ಯಗಳನ್ನು ಒಂದು ಶ್ಲೋಕರೂಪದಲ್ಲಿ ಉಲ್ಲೇಖಿಸಲಾಗಿದೆ.

**ಏಷ ನಾಗರಿಕಧರ್ಮೋಸ್ತು ಸ್ವದೇಶಿಯಂ ವ್ರತಂ ಸದಾ**
**ಸಮಾಜೇ ಬಂಧುಭಾವಶ್ಚ ಕುಟುಂಬೇ ಪ್ರಕೃತೌ ತಥಾ ||**

ಇದು ಪರಿಸರ ಸಂರಕ್ಷಣೆ, ಕುಟುಂಬ ಪ್ರಬೋಧನ್, ಸಾಮಾಜಿಕ ಸಮರಸತೆ, ಸ್ವದೇಶಿ ಜೀವನಶೈಲಿ ಮತ್ತು ನಾಗರಿಕ ಕರ್ತವ್ಯದ ಮೂಲಕ ಸಮಾಜ ಪರಿವರ್ತನೆಯ ಆಶಯವನ್ನು ಸೂಚಿಸುವ ಶ್ಲೋಕ. ಅಂತೆಯೇ ಹಿಂದಿಗೀತೆಯೊಂದರ "ಜಾಗೃತಿ ಶ್ರದ್ಧಾ ಬಢೇ ಧರ್ಮ್ ಮೇ, ಶೀಲವಾನ್ ಪರಿವಾರ್ ಸಭೀ, ಪರ್ಯಾವರಣ ಪ್ರಫುಲ್ಲಿತ ಕರಕೇ ಸಮರಸತಾ ಕೀ ರಾಹ್ ಗಹೀ, ಶಿಷ್ಟಾಚಾರ್ ಸ್ವದೇಶೀ ಅಪನೇ ಅಧಿಷ್ಠಾನ್ ಕೀ ಆನ್ ಬನೇ" – ಸಾಲಿನಲ್ಲಿ ಪಂಚ ಪರಿವರ್ತನೆಯ ಕಾರ್ಯಗಳನ್ನು ಒತ್ತಿ ಹೇಳಲಾಗಿದೆ.

**1. ಪರಿಸರ ಸಂರಕ್ಷಣೆ:** ಪರಿಸರ ಸಂರಕ್ಷಣೆ ಇಂದಿನ ಅತ್ಯಂತ ಅಗತ್ಯದ ಸಾಮಾಜಿಕ ಚಟುವಟಿಕೆಯಲ್ಲೊಂದು. ಇದಕ್ಕೆ ಎಲ್ಲರೂ ಕೈಜೋಡಿಸಬೇಕು. ಕುಗ್ಗುತ್ತಿರುವ ಹಸಿರಹೊದಿಕೆ, ನೀರಿನ ಸಮಸ್ಯೆ, ಪ್ಲಾಸ್ಟಿಕ್ ತ್ಯಾಜ್ಯನಿರ್ವಹಣೆ ಮೊದಲಾದ ಅನೇಕ ಸಂಗತಿಗಳ ಕುರಿತು ಜಾಗೃತ ಸಮಾಜವೇ ಸೂಕ್ತ ಪರಿಹಾರ ಕಂಡುಕೊಳ್ಳಬಲ್ಲುದು.




"ವ್ಯಕ್ತಿಯ ಬದುಕು ಪರಿಸರ ಕೇಂದ್ರಿತವಾಗಬೇಕು. ನಾನಾ ಕಾರಣಕ್ಕಾಗಿ ಪ್ರಕೃತಿಗೆ ವಿಮುಖವಾಗಿರುವ ಜೀವನಶೈಲಿಯಿಂದ ಹೊರಬಂದು ಮತ್ತೆ ಪರಿಸರಪೂರಕ ಜೀವನಶೈಲಿಯನ್ನು ರೂಪಿಸುವುದು, ಪರಿಸರದ ಸಂರಕ್ಷಣೆಯ ಮಹತ್ವ ಮತ್ತು ಈ ಕುರಿತು ಜನಜಾಗೃತಿಯ ಕಾರ್ಯಚಟುವಟಿಕೆಗಳನ್ನು ಆಯೋಜಿಸುವುದು, ಬಗೆಬಗೆಯ ಮಾಲಿನ್ಯದ ನಿಯಂತ್ರಣದ ಕುರಿತು ಮಾಹಿತಿ–ಜಾಗೃತಿಯನ್ನು ಮೂಡಿಸುವುದು, ಪರಿಸರದಲ್ಲುಂಟಾಗಿರುವ ಅಸಮತೋಲನ ಹಾಗೂ ಇದರಿಂದ ಆತಂಕಕ್ಕೊಳಗಾಗಿರುವ ಮಾನವನ ಬದುಕು; ಇವುಗಳ ಕುರಿತು ಅಧ್ಯಯನ, ಮಾಹಿತಿ–ಜಾಗೃತಿ, ಪರಿಸರದ ಕುರಿತು ನಮ್ಮೆಲ್ಲರ ಸಾಮಾಜಿಕ ಹೊಣೆಗಾರಿಕೆ ಬಗ್ಗೆ ನಿರಂತರ ಭಾವಜಾಗರಣೆಯ ಕಾರ್ಯ" – ಈ ಮೊದಲಾದುವುಗಳು ಪರಿಸರ ಸಂರಕ್ಷಣೆ ಕಾರ್ಯದ ಧ್ಯೇಯ. ಬೆಂಗಳೂರಿನ ಬಸವನಗುಡಿಯ ಬಿ.ಎಂ. ಎಸ್. ಇಂಜಿನಿಯರಿಂಗ್ ಕಾಲೇಜಿನಲ್ಲಿ ಜನವರಿ 1, 2022ರಂದು 'ಪರಿಸರ – ನಮ್ಮ ದೃಷ್ಟಿಕೋನ' ಎಂಬ ವಿಷಯದ ಕುರಿತು ಸಂಘದ ಸರಸಂಘಚಾಲಕರಾದ ಡಾ. ಮೋಹನ ಭಾಗವತ್ ಅವರು ನೀಡಿದ ಉಪನ್ಯಾಸದಲ್ಲಿ "ನಾವು ಬಹಳಷ್ಟು ಮುಂದೆ ಬಂದಿದ್ದೇವೆ. ಈಗ ನಾವು ನಿಧಾನವಾಗಿ ಹಿಂದಕ್ಕೆ ಹೋಗಬೇಕಾಗಿದೆ. ಇವತ್ತಿನಿಂದಲೇ ಇದರ ಪ್ರಾರಂಭ ಮಾಡಬೇಕಿದೆ. ನಾವು ನಮ್ಮ ಸ್ವಭಾವಗಳನ್ನು ಬದಲಿಸಿಕೊಳ್ಳಬೇಕಾಗಿದೆ. ಆಧುನಿಕ ವಿಜ್ಞಾನದಿಂದ ಪ್ರಾಪ್ತವಾದ ಭೌತಿಕ ಸುಖ ಸೌಲಭ್ಯಗಳನ್ನು ಏಕಾಏಕಿ ನಾವು ತ್ಯಜಿಸಬೇಕೆ? ಆ ರೀತಿ ನಾವು ಯೋಚಿಸುವುದಕ್ಕೂ ಸಾಧ್ಯವಿಲ್ಲ. ಮತ್ತು ಮಾಡುವುದಕ್ಕೂ ಸಾಧ್ಯವಿಲ್ಲ. ವಿನಾಶವಾದರೋ ಅದೇ ತ್ವರಿತಗತಿಯಲ್ಲೇ ಜರುಗುತ್ತದೆ. ಹಾಗಾಗಿ, ಅಭಿವೃದ್ಧಿಯೂ ಆಗಬೇಕು ಹಾಗೂ ಪರಿಸರವೂ ರಕ್ಷಿಸಲ್ಪಡಬೇಕು. ಈ ರೀತಿ ಎಲ್ಲವೂ ಒಟ್ಟಾಗಿ ಸಾಗಬೇಕಾಗಿದೆ. ಆಗಿರುವ ನಷ್ಟ ಮರಳಿ ಬರಬೇಕು ಹಾಗೂ ಆಗಿರುವ ಲಾಭವೂ ಜತೆಗೇ ಇರಬೇಕು. ಹೀಗೆ ಇವೆಲ್ಲವನ್ನೂ ಒಟ್ಟಿಗೆ ನಿರ್ವಹಿಸಬೇಕಾದರೆ ಇಲ್ಲಿಯವರೆಗಿನ ನಮ್ಮ ದೃಷ್ಟಿಕೋನದಲ್ಲಿ ಪರಿವರ್ತನೆಯನ್ನು ತರಬೇಕಾಗಿದೆ. ನಮ್ಮ ಪರಿಸರ ದೃಷ್ಟಿಕೋನಕ್ಕೆ ಸಂಬಂಧಿಸಿ ಕಾಲಕ್ಕೆ ತಕ್ಕಂತೆ ಯೋಚನೆಗಳನ್ನು ಮಾಡಬೇಕಾಗಿದೆ. ಆಪತ್ತು ಸಂಭವಿಸಿದಾಗ ಪ್ರಾಣಿಗಳು ಕೂಡ ತಮ್ಮ ಶೈಲಿಯಲ್ಲಿ ಬದಲಾವಣೆ ಮಾಡಿಕೊಳ್ಳುತ್ತವೆ. ಆದರೆ ಬುದ್ಧಿಶಕ್ತಿ ಹೊಂದಿರುವ ಮನುಷ್ಯ ಅದೇ ಕಾರಣಕ್ಕಾಗಿ ದಾರಿ ತಪ್ಪುತ್ತಾನೆ. ತಪ್ಪು ಕೆಲಸ ಮಾಡುತ್ತಾನೆ. ಇದರಿಂದಾಗಿ ಎಲ್ಲರೂ ಒಟ್ಟಿಗೇ ಸಾಯುತ್ತಾರೆ. ಬದುಕಿ ಉಳಿಯಬೇಕಾದರೆ ಎಲ್ಲರೂ ಬದಲಾಗಲೇಬೇಕು." ಎಂದಿದ್ದರು. "ನೀರು ಉಳಿಸಿ (ಪಾನೀ ಬಚಾವೋ), ಗಿಡವೊಂದನ್ನು ನೆಡುವುದು (ಪೇಡ್ ಲಗಾವೋ) ಮತ್ತು ಪಾಲಿಥೀನ್ ಕಡಿಮೆಗೊಳಿಸಿ (ಪಾಲಿಥೀನ್ ಹಠಾವೋ)" –ಇವು ಪರಿಸರ ಸಂರಕ್ಷಣೆಯ ಮೂರು ಪ್ರಧಾನ ಕಾರ್ಯಗಳು.

**2. ಕುಟುಂಬ ಪ್ರಬೋಧನ್:** ರಾಷ್ಟ್ರದ ಆಧಾರ ಸಮಾಜ. ಸಮಾಜದ ಅಡಿಗಲ್ಲು ಕುಟುಂಬ. ಕೌಟುಂಬಿಕ ಮೌಲ್ಯಗಳ ಪೋಷಣೆಯ ಆಶಯದೊಂದಿಗೆ, ಕುಟುಂಬದ ಸದಸ್ಯರಲ್ಲಿ ರಾಷ್ಟ್ರೀಯ ಹಾಗೂ ಸಾಮಾಜಿಕ ವಿಷಯಗಳ ಬಗ್ಗೆ ವೈಚಾರಿಕ–ಸಾಂಸ್ಕೃತಿಕ ಜಾಗೃತಿ, ರಾಷ್ಟ್ರನಿರ್ಮಾಣದ ಪ್ರಕ್ರಿಯೆಯಲ್ಲಿ ಕುಟುಂಬವೊಂದರ ಪಾತ್ರ–ಮಹತ್ವದ ಕುರಿತು ಅರಿವು ಮೂಡಿಸುತ್ತಾ, ಕುಟುಂಬಗಳಲ್ಲಿ ಮೌಲ್ಯಸಂವರ್ಧನೆಗಾಗಿ ವಿವಿಧ ರಚನಾತ್ಮಕ ಕಾರ್ಯಕ್ರಮಗಳೊಂದಿಗೆ ಕಾರ್ಯಪ್ರವೃತ್ತವಾಗಿರುವ ವಿಶಿಷ್ಟ ಯೋಜನೆಯೇ ಕುಟುಂಬ ಪ್ರಬೋಧನ್. ಕುಟುಂಬಗಳು ಸಮಾಜ ಹಾಗೂ ರಾಷ್ಟ್ರಜೀವನದ ಅವಿಭಾಜ್ಯ ಅಂಗ. ಕುಟುಂಬಗಳು ಬಲಿಷ್ಠವಾದರೆ ಸಮಾಜವೂ ಬಲಿಷ್ಠವಾಗುತ್ತದೆ, ರಾಷ್ಟ್ರವೂ ಸಮರ್ಥ–ಸದೃಢವಾಗುತ್ತದೆ. ಸಮಾಜಕ್ಕೆ ಕುಟುಂಬವೇ ಶಕ್ತಿ. 'ಯಥಾ ವಾಯುಂ ಸಮಾಶ್ರಿತ್ಯ ವರ್ತಂತೇ ಸರ್ವ ಜಂತವಃ, ತಥಾ ಗೃಹಸ್ಥಮಾಶ್ರಿತ್ಯ ವರ್ತಂತೇ ಸರ್ವ ಆಶ್ರಮಾಃ' ಅಂದರೆ ವಾಯುವನ್ನು ಆಶ್ರಯಿಸಿಕೊಂಡು ಹೇಗೆ ಎಲ್ಲಾ ಜಂತುಗಳು

*4ನೇ ಪುಟಕ್ಕೆ...*

## ಸಂಸ್ಮರಣೆ

# ಸ್ವಾಮಿ ಲಕ್ಷ್ಮಣಾನಂದ ಸರಸ್ವತಿ (1926–23 ಆಗಸ್ಟ್, 2008)



ಕೆಲವೊಂದು ವ್ಯಕ್ತಿಗಳ ವ್ಯಕ್ತಿತ್ವ ಎಂತಹವರನ್ನು ಸೆಳೆದುಬಿಡುತ್ತದೆ. ಅಂತಹ ವ್ಯಕ್ತಿಗಳಲ್ಲಿಯೊಬ್ಬರು ವೇದಾಂತ ಕೇಸರಿ ಸ್ವಾಮಿ ಲಕ್ಷ್ಮಣಾನಂದ ಸರಸ್ವತಿ ಅವರು. ಒಡಿಶಾದ ಫುಲ್ಬಾನಿ (ಕಂಧಮಾಲ್) ಜಿಲ್ಲೆಯ ಗುರ್ಜಂಗ್ ಗ್ರಾಮದಲ್ಲಿ 1924 ರಲ್ಲಿ ಜನಿಸಿದ ಅವರು ಬಾಲ್ಯದಿಂದಲೇ ಸಮಾಜಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟದ್ದರು. ಅವರು ತಮ್ಮ ಸಂಕಲ್ಪವನ್ನು ಪೂರೈಸುವ ಗುರಿಯೊಂದಿಗೆ ಆಧ್ಯಾತ್ಮಿಕ ಅಭ್ಯಾಸಗಳಿಗಾಗಿ ಹಿಮಾಲಯದ ಹಾದಿಯನ್ನು ಹಿಡಿದರು. ತದನಂತರ 1965ರಲ್ಲಿ, ಅವರು ಗೋರಕ್ಷಾ (ಗೋಸಂರಕ್ಷಣೆ) ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಸ್ವಾಮಿ ಲಕ್ಷ್ಮಣಾನಂದ ಸರಸ್ವತಿ ಅವರು ವೇದಾಂತ, ತತ್ತ್ವಶಾಸ್ತ್ರ, ಸಂಸ್ಕೃತ, ವ್ಯಾಕರಣದಲ್ಲಿ ಪಾರಂಗತರಾಗಿದ್ದರು. ತಮ್ಮ ಪಾಂಡಿತ್ಯದ ಕಾರಣಕ್ಕಾಗಿ ಅವರನ್ನು "ವೇದಾಂತ ಕೇಸರಿ" ಎಂದೇ ಜನರು ಗುರುತಿಸುತ್ತಿದ್ದರು.

ಸ್ವಾಮೀಜಿ ಅವರು ಬುಡಕಟ್ಟು ಜನರನ್ನು ಸಾಮಾಜಿಕ ಮತ್ತು ಧಾರ್ಮಿಕವಾಗಿ ಸಬಲೀಕರಣಗೊಳಿಸಲು ಶ್ರಮಿಸಿದರು. ಸಮಾಜ ಸುಧಾರಣೆಗೊಳ್ಳಬೇಕಾದರೆ ಶಿಕ್ಷಣ ಅಗತ್ಯವೆಂದು ಬಲವಾಗಿ ನಂಬಿದ್ದರು. ಹಾಗಾಗಿ ವಯಸ್ಕರ ಶಿಕ್ಷಣಕ್ಕಾಗಿ ರಾತ್ರಿ ಶಾಲೆ ಆರಂಭಿಸಿದ್ದರು. ಅವರು 1969ರಲ್ಲಿ 'ಕಲ್ಯಾಣ್ ಆಶ್ರಮ್' ಎಂಬ ಸಂಸ್ಕೃತ ಶಾಲೆಯನ್ನು ಪ್ರಾರಂಭಿಸಿದರು. ಬಾಲಕಿಯರ ಶಿಕ್ಷಣಕ್ಕಾಗಿ, ಅವರು ಕಂಧಮಾಲ್‌ನ ಜಲೇಸ್‌ಪಟದಲ್ಲಿ 'ಶಂಕರಾಚಾರ್ಯ ಕನ್ಯಾಶ್ರಮ' ಸಂಪೂರ್ಣ ವಸತಿ ಶಾಲೆಯನ್ನು ಸ್ಥಾಪಿಸಿದರು. ಎಲ್ಲಾ ಶಿಕ್ಷಣ ಕೇಂದ್ರಗಳಲ್ಲಿ ಶಿಕ್ಷಣದ ಜೊತೆಜೊತೆಗೆ ಕೃಷಿ ಕ್ಷೇತ್ರದ ಶಿಕ್ಷಣವನ್ನೂ ನೀಡತೊಡಗಿದರು. ಇದರಿಂದಾಗಿ ಆ ಸಮಾಜದ ಆರ್ಥಿಕ ವ್ಯವಸ್ಥೆಯು ಸುಧಾರಣೆಗೊಳ್ಳುವಂತಾಯಿತು.

ಸ್ವಾಮೀಜಿಯವರಿಗೆ ಪರಿಸರದ ಬಗೆಗೆ ಉತ್ಕಟ ಕಾಳಜಿಯಿತ್ತು. ಹಾಗಾಗಿ ಅವರು ಸ್ವತಃ ಗಿಡಗಳನ್ನು ನೆಟ್ಟು ರಕ್ಷಿಸುವುದರ ಮೂಲಕ ಇತರರಿಗೂ ಪ್ರೇರಣೆ ನೀಡುತ್ತಿದ್ದರು. ಹಾಗಾಗಿ ನಾವಿಂದು ಕಂಡ್ಮಾಲ್‌ನಲ್ಲಿ ಎಲ್ಲೆಡೆ ಹಸಿರನ್ನು ನೋಡಬಹುದು. ಈ ಜಿಲ್ಲೆಯು ಇತರ ಜಿಲ್ಲೆಗಳಿಗಿಂತ ಹೆಚ್ಚು ಅರಣ್ಯವನ್ನು ಹೊಂದಿದೆ. ಇದಕ್ಕೆಲ್ಲ ಸ್ವಾಮೀಜಿಯವರ ಪ್ರಯತ್ನವೇ ಕಾರಣ. ಜನರನ್ನು, ನಾಡನ್ನು ಸಂಪೂರ್ಣವಾಗಿ ರಕ್ಷಿಸುವ ಜವಾಬ್ದಾರಿಯನ್ನು ಸಮರ್ಥವಾಗಿ ಸ್ವಾಮೀಜಿಯವರು ನಿರ್ವಹಿಸಿದ್ದರು.

ಸ್ವಾಮೀಜಿಯವರ ಹಿಂದೂ ಧರ್ಮ ಪರವಾದ ಹೋರಾಟವನ್ನು ಖಂಡಿಸಿ ಮತಾಂಧರು 1970ರಿಂದ ಡಿಸೆಂಬರ್ 2007 ರವರೆಗೆ ಸ್ವಾಮೀಜಿ ಅವರ ಮೇಲೆ 8 ಬಾರಿ ದಾಳಿ ನಡೆಸಿದರು. ಈ ಪ್ರಯತ್ನಗಳು ಸಫಲವಾಗಲಿಲ್ಲ. ಆದರೆ ಆಗಸ್ಟ್ 23, 2008 ರಂದು ರಾತ್ರಿ ವೇದಾಂತ ಕೇಸರಿ ಸ್ವಾಮಿ ಲಕ್ಷ್ಮಣಾನಂದ ಸರಸ್ವತಿ ಅವರನ್ನು ಕ್ರೂರವಾಗಿ ಕೊಲ್ಲಲಾಯಿತು.

ರಾಷ್ಟ್ರೀಯ ಅಸ್ಮಿತೆಗಳಿಗೆ, ಸಮಾಜ ಸುಧಾರಣೆಗಾಗಿ ಪ್ರಾಣವನ್ನು ಮುಡಿಪಾಗಿಟ್ಟ ಸ್ವಾಮಿ ಲಕ್ಷ್ಮಣಾನಂದ ಸರಸ್ವತಿಯವರ ಕಾರ್ಯಗಳು ಹಲವರಿಗೆ ಮಾದರಿಯಾಗಿ, ಅವರ ಸಮಾಜಮುಖಿ ಕಾರ್ಯಗಳು ಅಜರಾಮರವಾಗಿ ಸಮಾಜದಲ್ಲಿ ಉಳಿದುಕೊಂಡಿವೆ.


# ಸೇವೆಯ ಗಂಗೋತ್ರಿ ಮಾಧವರಾವ್ ಪರಲ್ಕರ್

ಪ್ರಜ್ಞಾಹೀನ ಮಗುವಿನ ದೇಹದ ಮೇಲೆ ವೈದ್ಯರ ಬೆರಳುಗಳು ಚಲಿಸುತ್ತಿದ್ದಾಗಲೆಲ್ಲಾ ಮಗುವಿನಲ್ಲುಂಟಾಗುತ್ತಿದ್ದ ಚಲನೆಯನ್ನು ಕಂಡು ತಾಯಿಯ ಕಣ್ಣುಗಳಲ್ಲಿ ಸಂತಸದ ಹೊಳಪು ಹೆಚ್ಚುತ್ತಿತ್ತು. ಏಕೆಂದರೆ ಮಗನ ಚಿಕಿತ್ಸೆಗಾಗಿ ನೀರಿನಂತೆ ಹಣವನ್ನು ವ್ಯಯಿಸಿದ ನಂತರವೂ ಚೇತರಿಸಿಕೊಳ್ಳುವ ಯಾವುದೇ ಭರವಸೆ ಇರಲಿಲ್ಲ. ಅಂತಹ ಸಂದರ್ಭದಲ್ಲಿ ವೈದ್ಯ ಪರಲ್ಕರ್ ಶುಲ್ಕದ ರೂಪದಲ್ಲಿ ಒಂದು ರೂಪಾಯಿಯನ್ನೂ ಪಡೆಯದೇ ಗಂಭೀರ ಪಾರ್ಶ್ವವಾಯುವಿಗೆ ತುತ್ತಾಗಿದ್ದ ಆ ಮಗು 6 ಗಂಟೆಯೊಳಗೆ ಎದ್ದು ಕುಳಿತುಕೊಳ್ಳುವಂತೆ ಮಾಡಿದ್ದರು. ಅದೇ ಬಾಲಕ ಇಂದು ಮುಂಬಯಿನ ಅತ್ಯಂತ ಪ್ರತಿಷ್ಠಿತ ಚಾರ್ಟರ್ಡ್ ಅಕೌಂಟೆಂಟರಲ್ಲಿ ಒಬ್ಬನಾಗಿದ್ದಾನೆ.

ಸಿ. ಎ. ಕಂಚನ್ ನಾರಂಗ್‌ರಂತಹ ಅದೆಷ್ಟೋ ರೋಗಿಗಳಿಗೆ ಮತ್ತು ಅವರ ಕುಟುಂಬದ ಸದಸ್ಯರ ಪಾಲಿಗೆ ಮಾಧವ್ ರಾವ್ ಅವರು ದೇವರೇ ಆಗಿದ್ದರು. ಡಾ.ಪರಲ್ಕರರು ಎಂತಹ ಪ್ರಚಾರಕರಾಗಿದ್ದರೆಂದರೆ ಅವರ ಅಮೂಲ್ಯವಾದ ಜೀವನ ಸೇವಾ ಗಂಗೋತ್ರಿಯೇ ಆಗಿತ್ತು. ಡಾಕ್ಟರ್ ಪರಲ್ಕರರಿಂದ ಸ್ಥಾಪಿಸಲ್ಪಟ್ಟ "ನಾನಾ ಪಾಲ್ಕರ್ ರುಗ್ಣ ಸೇವಾ ಸದನವು", ಮುಂಬೈನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬಡ ರೋಗಿಗಳಿಗೆ ಒಂದು ವರದಾನವೇ ಸರಿ.

ಬಾಲ್ಯದಿಂದಲೇ ಸಂಘದ ಸ್ವಯಂಸೇವಕರಾಗಿದ್ದ ಮಾಧವರಾವ್ ಪರಲ್ಕರ್, ವಿದ್ಯಾರ್ಥಿಯಾಗಿದ್ದಾಗ ಕಲಿಕೆಯಲ್ಲಿ ಬುದ್ಧಿವಂತರಾಗಿದ್ದರು. 1947ರಲ್ಲಿ ಆಯುರ್ವೇದ ಚಿಕಿತ್ಸೆಯಲ್ಲಿ ಪದವಿ ಪೂರ್ಣಗೊಳಿಸಿ, ಕೆಲ





ದಿನಗಳ ಕಾಲ ಕ್ಲಿನಿಕ್ ನಡೆಸಿದ ಅವರು ನಂತರ ಸಂಘದ ಪ್ರಚಾರಕರಾದರು. ಆ ದಿನಗಳಲ್ಲಿ ಅವರು ಬಾಂದ್ರಾದಿಂದ ವಿರಾರ್ ಮತ್ತು ಚೆಂಬೂರಿಗೆ ಸೈಕಲ್ಲಿನಲ್ಲೇ ಓಡಾಡುತ್ತಿದ್ದರು. ಅವರು ತಮ್ಮ ವಾಕ್ಚಾತುರ್ಯ ಮತ್ತು ಆಕರ್ಷಕ ವ್ಯಕ್ತಿತ್ವದಿಂದಾಗಿ ಯುವಕರ ನಡುವೆ ಬಹಳ ಜನಪ್ರಿಯರಾಗಿದ್ದರು. ಹಲವಾರು ವರ್ಷಗಳ ಕಾಲ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಅಖಿಲ ಭಾರತೀಯ ಸಂಘಟನಾ ಕಾರ್ಯದರ್ಶಿ ಆಗಿದ್ದರು. ಆದಾಗ್ಯೂ ಅವರ ಮನಸ್ಸಿನಲ್ಲಿ ಬಡ ರೋಗಿಗಳ ಬಗೆಗಿನ ಸೇವಾ ಮನೋಭಾವವನ್ನು ಗುರುತಿಸಿದ ಅಂದಿನ ಸರಸಂಘಚಾಲಕರಾದ ಶ್ರೀ ಗುರೂಜಿ ಗೋಳ್ವಲ್ಕರ್, ಡಾಕ್ಟರ್ ಪರಲ್ಕರರಿಗೆ ರೋಗಿಗಳು ಮತ್ತು ಅವರ ಕುಟುಂಬದ ಸದಸ್ಯರ ಊಟ, ವಸತಿಯ ಸೌಲಭ್ಯಕ್ಕಾಗಿ ಒಂದು ಸೇವಾಸದನವನ್ನು ಸ್ಥಾಪಿಸುವ ಗುರುತರ ಜವಾಬ್ದಾರಿಯನ್ನು ನೀಡಿದರು.

ಕ್ಯಾನ್ಸರ್ ಮತ್ತು ಟಿ.ಬಿ.ಯಂತಹ ಗಂಭೀರ ಕಾಯಿಲೆಗಳ ಚಿಕಿತ್ಸೆಯು ದುಬಾರಿ ಹಾಗೂ ದೀರ್ಘಕಾಲದ್ದಾಗಿರುತ್ತದೆ. ರೋಗಿಗಳಿಗೇನೋ ಆಸ್ಪತ್ರೆಯಲ್ಲಿಯೇ ಆಹಾರವನ್ನು ನೀಡಲಾಗುತ್ತದೆ. ಆದರೆ ಕುಟುಂಬದ ಸದಸ್ಯರಿಗೆ ಮುಂಬೈನಂಥ ಮಹಾನಗರದಲ್ಲಿ ವಸತಿ ಹಾಗೂ ಊಟದ ವೆಚ್ಚವನ್ನು ನಿಭಾಯಿಸುವುದು ಕಷ್ಟಸಾಧ್ಯ.ಇಂದು ಟಾಟಾ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆಯಿಂದ ಅರ್ಧ ಕಿಲೋಮೀಟರ್ ದೂರದಲ್ಲಿರುವ 10 ಅಂತಸ್ತಿನ ನಾನಾ ಪಾಲ್ಕರ್ ಸ್ಮಾರಕ ರುಗ್ಣ ಸೇವಾಸದನವು ನೂರಾರು ರೋಗಿಗಳಿಗೆ ಹಾಗೂ ಕುಟುಂಬದವರಿಗೆ ಆಪದ್ಬಾಂಧವನೆನಿಸಿದೆ. 10 ರೂಪಾಯಿಗೆ ಊಟ ಮತ್ತು 1 ತಿಂಗಳವರೆಗೆ ಉಚಿತ ವಸತಿ ವ್ಯವಸ್ಥೆ ಬಡ ಪರಿವಾರದವರಿಗೆ ದೊಡ್ಡ ಸಹಾಯವೇ ಸರಿ.

ತಮ್ಮ ಅವಿರತ ಪರಿಶ್ರಮ ಹಾಗೂ ಸೇವಾಭಾವದ ಬಲದಿಂದ ಪರಲ್ಕರರು ಈ ಸೇವಾಸದನವನ್ನು ಕಟ್ಟಿ ಬೆಳೆಸಿದರು. ಪರಲ್ಕರರು ಸಮಾಜದ ಪ್ರತಿಯೊಂದು ವರ್ಗದವರ ಸಹಕಾರವನ್ನು ಪಡೆದರು. ಪರಲ್ಕರ್ ಅವರ ಸತತ ಪ್ರಯತ್ನದಿಂದ ಪ್ರಾರಂಭವಾದ ಗೋಖಲೆ ಡಯಾಲಿಸಿಸ್ ಕೇಂದ್ರದಲ್ಲಿ ಇಂದು 14 ಯಂತ್ರಗಳ ಸಹಾಯದಿಂದ ಹಲವು ಶಿಫ್ಟ್‌ಗಳಲ್ಲಿ ಬಡ ರೋಗಿಗಳಿಗೆ ಉಚಿತವಾಗಿ ಡಯಾಲಿಸಿಸ್ ಸೇವೆ ನೀಡಲಾಗುತ್ತಿದೆ. ತುರ್ತು ಪರಿಸ್ಥಿತಿಯಲ್ಲಿ ಜೈಲಿನಲ್ಲಿದ್ದು, ಖೈದಿಗಳಿಗೆ ಯೋಗ ಕಲಿಸಿದ್ದು ಮಾತ್ರವಲ್ಲದೆ ತಮ್ಮ ಚಿಕಿತ್ಸಾ ಕೌಶಲದಿಂದ ಉಚಿತವಾಗಿ ನೂರಾರು ರೋಗಿಗಳನ್ನು ಗುಣಪಡಿಸಿದರು.

## ಸೈನಿಕರಿಗೆ ಸದಾ ಗೌರವ ನೀಡಬೇಕು


"ಈ ರಾಷ್ಟ್ರದ ಗಡಿಗಳಲ್ಲಿ ನಮ್ಮ ರಾಷ್ಟ್ರಧ್ವಜವು ಹಾರುತ್ತಿರುವುದು ಚಲಿಸುವ ಗಾಳಿಯಿಂದಲ್ಲ, ಅದನ್ನು ರಕ್ಷಿಸಲು ಸರ್ವೋಚ್ಚ ತ್ಯಾಗ ಮಾಡಿದ ನಮ್ಮ ಧೀರ ಯೋಧರ ಕೊನೆಯುಸಿರಿನಿಂದ" ಎಂಬ ಮಾತು ರಾಷ್ಟ್ರದ ರಕ್ಷಣೆಗೆ ಪ್ರಾಣವನ್ನು ತೆತ್ತ ಸೈನಿಕರ ಮಹತ್ವವನ್ನು ತಿಳಿಸುತ್ತದೆ. ನಮ್ಮ ಮುಂದಿನ ಸುಭದ್ರ ಭವಿಷ್ಯಕ್ಕಾಗಿ ತಮ್ಮ ಇಂದಿನ ಸುಖವನ್ನು ತ್ಯಾಗ ಮಾಡಿ ದಿನದ 24 ಗಂಟೆಯೂ ರಾಷ್ಟ್ರದ ರಕ್ಷಣೆಯಲ್ಲಿ ತೊಡಗಿಕೊಂಡಿರುವ ಸೈನಿಕರಿಗೆ ಗೌರವವನ್ನು ಸಲ್ಲಿಸುವುದು ಈ ನಾಡಿನ ನಾಗರಿಕರಾಗಿ ನಮ್ಮ ಆದ್ಯ ಕರ್ತವ್ಯ. ಶತ್ರುಗಳಿಂದ ಗಡಿಗಳನ್ನು ಸುರಕ್ಷತೆಯಿಂದ ನೋಡಿಕೊಳ್ಳುವುದಲ್ಲದೇ, ಈ ನಾಡಿನ ಯಾವುದೇ ಭಾಗದಲ್ಲಿ ಪ್ರಾಕೃತಿಕ ಮತ್ತು ಮಾನವ ನಿರ್ಮಿತ ದುರಂತಗಳು ಸಂಭವಿಸಿದಾಗ ಅಲ್ಲಿಗೆ ನೆರವಿಗಾಗಿ ಧಾವಿಸುವವರು ಸೈನಿಕರು. ಅಂತಹ ಸೈನಿಕರನ್ನು ಅವಮಾನಿಸುವ ಯಾವುದೇ ದಾರ್ಷ್ಟ್ಯ ನಮ್ಮಿಂದಾಗಬಾರದು. ನಮ್ಮ ನಾಡಿನಲ್ಲಾಗುವ ಅವಘಡಗಳಲ್ಲದೆ ಜಗತ್ತಿನಾದ್ಯಂತ ಭಾರತೀಯರೂ ಸೇರಿದಂತೆ ವಿವಿಧ ದೇಶಗಳ ನಾಗರಿಕರು ಸಂಕಷ್ಟಕ್ಕೆ ಸಿಲುಕಿದಾಗ ಅವರನ್ನು ಕಾಪಾಡುವಲ್ಲೂ ನಮ್ಮ ಸೈನಿಕರು ಕಾರ್ಯನಿರತರಾದ ನಿದರ್ಶನಗಳು ಹಲವಿದೆ. ಸೈನಿಕರನ್ನು ಕಂಡಾಗ ಅವರನ್ನು ಗೌರವಿಸುವುದು, ಅವರ ಪ್ರಯಾಣದ ಸಂದರ್ಭದಲ್ಲಿ ಆಸನಗಳನ್ನು ಒದಗಿಸುವುದು, ಅವಘಡಗಳಾದ ಸಂದರ್ಭದಲ್ಲಿ ಕಾರ್ಯನಿರತರಾದ ಯೋಧರಿಗೆ ನಮ್ಮ ಕೈಲಾದ ಸಹಾಯವನ್ನು ಮಾಡುವುದು, ಗಡಿ ಕಾಯುವ ಯೋಧರ ಯೋಗಕ್ಷೇಮಕ್ಕಾಗಿ ದಿನದಲ್ಲೊಮ್ಮೆ ಪ್ರಾರ್ಥಿಸುವುದು ನಾವು ಅವರಿಗೆ ನೀಡುವ ಗೌರವವಾದೀತು. ಯುವಜನತೆಯನ್ನು, ನಮ್ಮ ಮಕ್ಕಳನ್ನೂ ಸೇನೆಗೆ ಸೇರಿಸುವ ಮನೋಭಾವವನ್ನು ಹೆಚ್ಚಿಸಿಕೊಳ್ಳುವುದು ನಮ್ಮ ಕರ್ತವ್ಯ.



## ಪುಸ್ತಕ: ನಮ್ಮೆಲ್ಲರ ತಾಯಿ ಭಾರತ

**ಮೂಲ:** ಚಮನ್ ಲಾಲ್
**ಕನ್ನಡಕ್ಕೆ:** ಎಲ್. ವಿ. ಶಾಂತಕುಮಾರಿ
**ಪ್ರಕಾಶಕರು:** ರಾಷ್ಟ್ರೋತ್ಥಾನ ಸಾಹಿತ್ಯ
**ಬೆಲೆ:** 220ರೂ/-

ಭಾರತ, ಭಾರತದ ಸಂಸ್ಕೃತಿ–ಪರಂಪರೆ–ಸಮಾಜಜೀವನ; ಭಿನ್ನತೆ, ವೈಪರೀತ್ಯಗಳ ನಡುವೆಯೂ ಎದ್ದು ಕಾಣುವ ಏಕತೆ; ಮೇಲ್ನೋಟಕ್ಕೆ ಆಗೀಗ ಕಾಣುವ ಕೋಭೆ, ತಲ್ಲಣಗಳು, ಅರಾಜಕತೆ, ಅಭದ್ರತೆಗಳ ನಡುವೆಯೂ ಅನೂಚಾನವಾಗಿ ಅವಿಚ್ಛಿನ್ನವಾಗಿ ಉಳಿದುಕೊಂಡು ಬಂದಿರುವ ಇಲ್ಲಿಯ ಜೀವನಪದ್ಧತಿ–ಧರ್ಮ– ಇವೆಲ್ಲವೂ ಸದಾ ಬೆರಗುಮೂಡಿಸುತ್ತವೆ. ರಾಗದ್ವೇಷರಹಿತ ಮನಸ್ಸುಗಳಿಗೆ ಭಾರತವೆಂದರೆ ನಿಗೂಢ– ಅಚ್ಚರಿಯ ದೇಶ. ಹಾಗಾಗಿ ಶತಶತಮಾನಗಳಿಂದಲೂ ಭಾರತವನ್ನು ನೋಡುವ, ಶೋಧಿಸುವ ಉದ್ದೇಶದಿಂದ ಬರುವವರು ಅಸಂಖ್ಯ. ತಾವಿದ್ದಲ್ಲಿಂದಲೇ ಭಾರತವನ್ನು ಕುರಿತು ಕೇಳುವ, ಓದುವ, ತಿಳಿಯುವ ಆಸಕ್ತರಿಗೂ ಲೆಕ್ಕವಿಲ್ಲ; ದೇಶ–ಭಾಷೆಗಳ ಗಡಿಯೂ ಇಲ್ಲ. ಇನ್ನು, ಈ ಕಾರಣಗಳ ಹೊರತಾಗಿ, ಕೇವಲ ಇಲ್ಲಿನ ಸಂಪತ್ತಿನ ಲೂಟಿಗಾಗಿ ಮತ್ತು ತಮ್ಮ ಮತಗಳ ವಿಸ್ತಾರಕ್ಕಾಗಿ ಬಂದವರೂ ಸಾಕಷ್ಟು ಇದ್ದಾರೆ. ಈ ಕೃತಿ, ಅನ್ಯಾನ್ಯ ಕಾರಣಗಳಿಂದಾಗಿ ಭಾರತಕ್ಕೆ ಬಂದುಹೋದವರು, ಭಾರತವನ್ನು ಕುರಿತು ತಿಳಿದು ಬರೆದವರು, ಭಾರತೀಯ ಪರಂಪರೆಗೆ ಮಣಿದು ಕೃತಜ್ಞತೆ ಸಲ್ಲಿಸಿದವರು ಹೀಗೆ ಹಲವರ ಅಭಿಪ್ರಾಯಗಳನ್ನು ದಾಖಲಿಸಿದೆ. ಈ ಅಭಿಪ್ರಾಯಗಳು ನಮಗೆ, ನಮ್ಮ ಸುದೀರ್ಘ ಪರಂಪರೆ, ನಾಗರಿಕತೆ, ಇತಿಹಾಸ, ಸಂಸ್ಕೃತಿಗಳನ್ನು ಕುರಿತು ನಮ್ಮ ಇತಿಹಾಸ ಪುಸ್ತಕಗಳು ಪಾಠಗಳು ಹೇಳದ ಅಪೂರ್ವ ಮಾಹಿತಿಯನ್ನು ನೀಡುತ್ತವೆ.




ವೆಬ್‌ಸೈಟ್: https://sahityabooks.com/shop/rashtrotthana-sahitya/nammellara-taayi-bharata/

ಸಂಪರ್ಕ: 6360581957

**ಸಂಪಾದಕೀಯ ಸಹಕಾರ:** ರಾಜೇಶ್ ಪದ್ಮಾರ್, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಗಿರಿಧರ್ ಉದ್ಯಾವರ, ಪಂಚಮಿ ಬಾಕಿಲಪದವು, ಹರಿಪ್ರಸಾದ್ ಈಶ್ವರಮಂಗಲ

### ಲಾವೋಸ್‌ನಲ್ಲಿ ರಾಮಲಲ್ಲಾನ ಅಂಚೆಚೀಟಿ ಬಿಡುಗಡೆ




ಕೋಟ್ಯಂತರ ಭಾರತೀಯರ ಐದು ಶತಮಾನಗಳ ಆಶಯದಂತೆ ರಾಮಜನ್ಮಭೂಮಿ ಅಯೋಧ್ಯೆಯಲ್ಲಿ 2024ರ ಜನವರಿ 22ಕ್ಕೆ ರಾಮಲಲ್ಲಾನ ಪ್ರಾಣಪ್ರತಿಷ್ಠೆಯೊಂದಿಗೆ ನೆರವೇರಿತ್ತು. ಇದೀಗ ರಾಮಲಲ್ಲಾನ ಚಿತ್ರವಿರುವ ವಿಶ್ವದ ಮೊದಲ ಅಂಚೆಚೀಟಿ ಲಾವೋಸ್ ನಲ್ಲಿ ಬಿಡುಗಡೆಗೊಂಡಿದೆ. ಮೂರು ದಿನಗಳ ಲಾವೋಸ್ ಪ್ರವಾಸದ ಸಂದರ್ಭದಲ್ಲಿ ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿದರು. ಆಗ್ನೇಯ ಏಷ್ಯಾ ರಾಷ್ಟ್ರಗಳಿಗೆ ಸಂಬಂಧಿಸಿದ ಸಭೆಯಲ್ಲಿ ಭಾಗವಹಿಸಿದ್ದ ಜೈಶಂಕರ್ ಅವರು, ಭಾರತ ಮತ್ತು ಲಾವೋಸ್ ನಡುವಿನ ಸಾಂಸ್ಕೃತಿಕ ಸಂಬಂಧದ ಭಾಗವಾಗಿ ಈ ಅಂಚೆ ಚೀಟಿಯನ್ನು ಅನಾವರಣಗೊಳಿಸಿದರು. ಅದರ ಜತೆಗೆ ಲಾವೋಸ್‌ನ ಪುರಾತನ ರಾಜಧಾನಿ ಲುವಾಂಗ್ ಪ್ರಬಾಂಗ್‌ನಲ್ಲಿರುವ ಬುದ್ಧನ ಚಿತ್ರವಿರುವ ಅಂಚೆ ಚೀಟಿಯನ್ನೂ ಬಿಡುಗಡೆಗೊಳಿಸಿದರು.

### ಜಾಗತಿಕ ಹಾಲು ಪೂರೈಕೆಗೆ ಭಾರತ 25% ಕೊಡುಗೆ



ಜಾಗತಿಕವಾಗಿ ಹಾಲು ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ಭಾರತವು ವಿಶ್ವದ ಹಾಲು ಪೂರೈಕೆಗೆ 25 ಪ್ರತಿಶತದಷ್ಟು ಕೊಡುಗೆ ನೀಡುತ್ತಿದೆ. ಈ ಮೂಲಕ ವಿಶ್ವದಲ್ಲೇ ಮೊದಲ ಸ್ಥಾನದಲ್ಲಿದೆ. ಕಳೆದ 9 ವರ್ಷಗಳಲ್ಲಿ ದೇಶದಲ್ಲಿ ಹಾಲಿನ ಉತ್ಪಾದನೆಯು ಸುಮಾರು 6 ಪ್ರತಿಶತದಷ್ಟು ವಾರ್ಷಿಕ ಬೆಳವಣಿಗೆಯ ದರದಲ್ಲಿ ಬೆಳೆಯುತ್ತಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಇನ್ನೊಂದೆಡೆ ವಿಶ್ವ ಹಾಲು ಉತ್ಪಾದನೆಯು ವಾರ್ಷಿಕವಾಗಿ 2.1 ಪ್ರತಿಶತದಷ್ಟು ಬೆಳೆಯುತ್ತಿದೆ.

### ಭಾರತದ ಶೇ.95 ಹಳ್ಳಿಗಳಿಗೆ ಇಂಟರ್ನೆಟ್ ಪ್ರವೇಶ

ಇಂದು ಭಾರತದಲ್ಲಿ 95 ಪ್ರತಿಶತಕ್ಕೂ ಹೆಚ್ಚು ಹಳ್ಳಿಗಳು 3G ಅಥವಾ 4G ಮೊಬೈಲ್ ಸಂಪರ್ಕದೊಂದಿಗೆ ಇಂಟರ್ನೆಟ್ ಪ್ರವೇಶವನ್ನು ಹೊಂದಿವೆ ಎಂದು ಸಂವಹನ ಸಚಿವಾಲಯವು ಬಿಡುಗಡೆ ಮಾಡಿದ ಅಂಕಿಅಂಶಗಳು ತಿಳಿಸಿದೆ. ಸುಮಾರು 6 ಲಕ್ಷದ 44 ಸಾವಿರ ಹಳ್ಳಿಗಳ ಪೈಕಿ ಸುಮಾರು 6 ಲಕ್ಷದ 13 ಸಾವಿರ ಹಳ್ಳಿಗಳು ಈ ವರ್ಷದ ಏಪ್ರಿಲ್ ವೇಳೆಗೆ ಇಂಟರ್ನೆಟ್ ಪ್ರವೇಶವನ್ನು ಹೊಂದಿವೆ. ಭಾರತದಲ್ಲಿನ ಒಟ್ಟು 95 ಕೋಟಿ 44 ಲಕ್ಷ ಇಂಟರ್ನೆಟ್ ಚಂದಾದಾರರ ಪೈಕಿ 39 ಕೋಟಿ 83 ಲಕ್ಷಕ್ಕೂ ಹೆಚ್ಚು ಜನರು ಗ್ರಾಮೀಣ ಪ್ರದೇಶದವರು. ಹಳ್ಳಿಗಳು ಮತ್ತು ಶ್ರೇಣಿ–2 ಮತ್ತು ಶ್ರೇಣಿ–3 ನಗರಗಳನ್ನು ಒಳಗೊಂಡಂತೆ ದೇಶದ ಒಟ್ಟು ಇಂಟರ್ನೆಟ್ ಚಂದಾದಾರರು ಕಳೆದ ಹತ್ತು ವರ್ಷಗಳಲ್ಲಿ ಸುಮಾರು 25 ಕೋಟಿ 16 ಲಕ್ಷದಿಂದ ಶೇಕಡಾ 14.26 ರಷ್ಟು ಸಂಯೋಜಿತ ವಾರ್ಷಿಕ ಬೆಳವಣಿಗೆಯ ದರದಲ್ಲಿ ಬೆಳೆದಿದ್ದಾರೆ ಎಂದು ಸಚಿವಾಲಯವು ಮಾಹಿತಿ ನೀಡಿದೆ.

## ಸಾಲುದ್ದದ ಸುದ್ದಿಗಳು

### ಸರ್ಕಾರಿ ಉದ್ಯೋಗಿಗಳು ಆರ್‌ಎಸ್‌ಎಸ್ ಸೇರಲು ಇದ್ದ ನಿರ್ಬಂಧ ತೆರವು



ಭಾರತದ ಪರಮವೈಭವಕ್ಕಾಗಿ ಸಂಕಲ್ಪ ತೊಟ್ಟು ಸಮಗ್ರ ಭಾರತೀಯ ಉನ್ನತಿಗಾಗಿ ಶ್ರಮಿಸುತ್ತಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಸರಕಾರಿ ಉದ್ಯೋಗಿಗಳ ಮೇಲೆ ಹೇರಲಾಗಿದ್ದ ನಿರ್ಬಂಧವನ್ನು ಕೇಂದ್ರ ಸರಕಾರ ತೆಗೆದುಹಾಕಿದೆ. ಸರಕಾರದ ಈ ನಿರ್ಧಾರವು ದೇಶದ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಬಲಪಡಿಸುವಂತಹದ್ದಾಗಿದೆ ಎಂದು ಆರೆಸ್ಸೆಸ್ ಸ್ವಾಗತಿಸಿದೆ. ಹಿಂದಿನ ಕಾಂಗ್ರೆಸ್ ಸರಕಾರ 1966ರಲ್ಲಿ ಹೇರಿದ್ದ ನಿರ್ಬಂಧ ಇದಾಗಿತ್ತು. 58 ವರ್ಷಗಳ ಬಳಿಕ ನಿರ್ಬಂಧ ತೆರವುಗೊಂಡಿದೆ.

### ದೇಶದಲ್ಲಿ ನಿರುದ್ಯೋಗ ದರವು ಶೇಕಡಾ 3.2ಕ್ಕೆ ಇಳಿಕೆ

ಪ್ರಸ್ತುತ ಸರ್ಕಾರದ ನೀತಿ ಮಧ್ಯಸ್ಥಿಕೆಗಳಿಂದ ದೇಶದಲ್ಲಿ ನಿರುದ್ಯೋಗ ದರವು ಶೇಕಡಾ 3.2ಕ್ಕೆ ಇಳಿದಿದೆ. ಮುಂಬರುವ ವರ್ಷಗಳಲ್ಲಿ ನಿರುದ್ಯೋಗ ದರವು ಶೇಕಡಾ 3ಕ್ಕಿಂತ ಕಡಿಮೆಯಾಗಲಿದೆ. ಒಂದು ದಶಕದಲ್ಲಿ, ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಾವಕಾಶಗಳು ಹೆಚ್ಚಿವೆ. ಪಿಎಲ್‌ಎಫ್‌ಎಸ್ ಆವರ್ತಕ ಕಾರ್ಮಿಕ ಸಮೀಕ್ಷೆಯ ವರದಿಯ ಪ್ರಕಾರ, ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗ ದರವು 2022–2023 ರಲ್ಲಿ 5.3 ರಿಂದ 2.4 ಕ್ಕೆ ಇಳಿದಿದೆ. ಗ್ರಾಮೀಣ ಉದ್ಯೋಗವು 2017–18ರಲ್ಲಿ ಶೇಕಡಾ 48.1 ರಿಂದ 2022–2023ರಲ್ಲಿ ಶೇಕಡಾ 59.4ಕ್ಕೆ ಏರಿದೆ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವ ಡಾ. ಮನ್ಸುಖ್ ಮಾಂಡವಿಯಾ ಅವರು ಸಂಸತ್ತಿನಲ್ಲಿ ತಿಳಿಸಿದರು.

### ಸ್ಮಾರಕ ಹಾನಿಗೆ 2 ವರ್ಷ ಜೈಲು, ₹1 ಲಕ್ಷ ದಂಡ



ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ ಅಧಿನಿಯಮ 1963 (1964ರ ಕರ್ನಾಟಕ ಅಧಿನಿಯಮ 4ನ್ನು) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಸಂರಕ್ಷಿತ ಸ್ಮಾರಕವನ್ನು ನಾಶಪಡಿಸುವುದು, ಹಾನಿಗೊಳಿಸುವುದು ಅಥವಾ ವಿರೂಪಗೊಳಿಸಿದರೆ ಇದ್ದ ಶಿಕ್ಷೆಯನ್ನು ಮೂರು ತಿಂಗಳ ಬದಲಿಗೆ ಎರಡು ವರ್ಷಗಳವರೆಗೆ ಮತ್ತು ದಂಡವನ್ನು 2000 ರೂ. ಬದಲಿಗೆ 1 ಲಕ್ಷ ರೂ.ಗಳು ಎಂದು ತಿದ್ದುಪಡಿ ಮಾಡಲಾಗಿದೆ. ನಿಯಮಗಳ ರಚನಾಧಿಕಾರದ ಯಾವುದೇ ನಿಯಮವನ್ನು ಉಲ್ಲಂಘಿಸಿದರೆ ಶಿಕ್ಷೆಯು 3 ತಿಂಗಳ ಬದಲಿಗೆ ಎರಡು ವರ್ಷಗಳವರೆಗೆ ಹಾಗೂ ದಂಡವನ್ನು 2000ರೂ. ಬದಲಿಗೆ 1 ಲಕ್ಷ ರೂ. ಹಾಗೂ ಉಪಪ್ರಕರಣಗಳಲ್ಲಿ ದಂಡ 500 ರೂ. ಬದಲಿಗೆ 1 ಲಕ್ಷ ರೂ. ಎಂದು ತಿದ್ದುಪಡಿ ಮಾಡಲಾಗಿದೆ.

# ಒಲಿಂಪಿಕ್ಸ್‌ನಲ್ಲಿ ಭಾರತದ ಹೊಸ ಮನ್ವಂತರಕ್ಕೆ ಸಾಕ್ಷಿಯಾದ ಮನು ಬಾಕರ್‌ಗೆ ಪ್ರೇರಣೆ ಭಗವದ್ಗೀತೆ

ಪ್ರೇರಣಾ

ಸತತ ಪ್ರಯತ್ನ ಅದಮ್ಯ ಉತ್ಸಾಹ ಸಾಧಿಸುವ ಛಲ ಈ ಮೂರು ಪ್ರವಾಹದಂತೆ ವ್ಯಕ್ತಿಯಲ್ಲಿ ಹರಿಯುತ್ತಿದ್ದರೆ ಆತ ಎಂತಹ ಚಕ್ರವ್ಯೂಹವನ್ನಾದರೂ ಕ್ಷಣಮಾತ್ರದಲ್ಲಿ ಭೇದಿಸಬಲ್ಲ ಎಂಬುದಕ್ಕೆ ಸ್ಪಷ್ಟ ನಿದರ್ಶನ ಮನು ಬಾಕರ್. 2020ರ ಟೋಕಿಯೋ ಒಲಿಂಪಿಕ್ಸ್ ನಲ್ಲಿ ಭಾಗವಹಿಸಿದ್ದ ಮೂರು ಸ್ಪರ್ಧೆಗಳಲ್ಲೂ ಸತತ ಸೋಲನ್ನ ಅನುಭವಿಸಿ, ಅದರ ನೋವಿನಿಂದ ಹೊರಬಾರದೆ ಹಲವು ತಿಂಗಳುಗಳನ್ನು ಕಳೆದರು. ಹಲವರಿಂದ ನಿಂದನೆಯ ಮಾತುಗಳನ್ನು ಕೇಳಿದ್ದರು. ಒಂದೊಮ್ಮೆ ಈ ನೋವು ಮನಸ್ಸನ್ನು ತೀವ್ರ ಘಾಸಿಗೊಳಿಸಿದಾಗ ಶೂಟಿಂಗ್ನಿಂದ ಹಿಂದುಳಿಯಲು ನಿರ್ಧರಿಸಿದ್ದರಂತೆ. ಆದರೆ ತನ್ನ ಕಾರ್ಯವನ್ನು ಎಂದಿಗೂ ಮಾಡುತ್ತಿರಬೇಕು ಕರ್ಮಫಲವನ್ನು ಯೋಚಿಸಬಾರದು ಎಂದು ಮತ್ತೆ ಗನ್ ಎತ್ತಿದವರು ಇಂದು ಸಂಪೂರ್ಣ ವಿಶ್ವವೇ ತನ್ನತ್ತ ತಿರುಗಿ ನೋಡುವಂತೆ ಮಾಡಿದ್ದಾರೆ.

ಮನು ಬಾಕರ್ ಮೂಲತಃ ಹರ್ಯಾಣ ರಾಜ್ಯದವರು. 2002 ಫೆಬ್ರವರಿ 18ರಂದು ಜಜ್ಜರ್ ಜಿಲ್ಲೆಯ ಗುರಿಯಹಳ್ಳಿಯಲ್ಲಿ ಇವರು ಜನಿಸುತ್ತಾರೆ. ತಂದೆ ರಾಮ ಕಿಶನ್ ಬಾಕಾರ್ ಭಾರತೀಯ ನೌಕಾ ಸೇನೆಯಲ್ಲಿ ಚೀಫ್ ಇಂಜಿನಿಯರ್. ತಾಯಿ ಸುಮೇದ ಬಾಕರ್ ಶಾಲೆಯೊಂದರಲ್ಲಿ ಗುರುಗಳಾಗಿ ವಿದ್ಯಾದಾನ ಮಾಡುತ್ತಿದ್ದಾರೆ. ಹೇಳಿ ಕೇಳಿ ಹರಿಯಾಣ ಕುಸ್ತಿಪಟುಗಳಿಗೆ ಹೆಸರುವಾಸಿ. ಆದರೆ ಮನುಬಾಕರ್ ಕುಸ್ತಿ ಬದಲಿಗೆ ಶೂಟಿಂಗ್ ಆರಿಸಿಕೊಂಡರು. ಕ್ರೀಡೆಯೊಂದಿಗೆ ಶ್ರೀರಾಮ್ ಮಹಿಳಾ ಕಾಲೇಜಿನಲ್ಲಿ ರಾಜಕೀಯಶಾಸ್ತ್ರದಲ್ಲಿ ಬಿಎ ಪದವಿಯನ್ನು ಪಡೆದುಕೊಂಡಿದ್ದಾರೆ.

**ಬಾಲ್ಯದಲ್ಲೇ ಬಹುಮುಖ ಪ್ರತಿಭೆ:** ಸಾಧಿಸುವವನಿಗೆ ವಯಸ್ಸು ಮಿತಿಯಾಗುವುದಿಲ್ಲ ಎಂಬುದಕ್ಕೆ ಅನ್ವರ್ಥ ಮನು ಬಾಕರ್. ಅಂದ ಹಾಗೆ ಮನುಬಾಕರ್ ವಯಸ್ಸು ಕೇವಲ 22. ಬಾಲ್ಯದಿಂದಲೂ ಕ್ರೀಡಾ ಕ್ಷೇತ್ರದಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿದ್ದ ಇವರು ಟೆನ್ನಿಸ್, ಸ್ಕೇಟಿಂಗ್, ಬಾಕ್ಸಿಂಗ್ ಹೀಗೆ ಹಲವು ಕ್ಷೇತ್ರಗಳಲ್ಲಿ ಸೈ ಎನಿಸಿಕೊಂಡವರು. ಮಣಿಪುರ ಮೂಲದ ಸಮರ ಕಲೆ ಟಾಂಗ್ ಟಾದಲ್ಲಿ ರಾಷ್ಟ್ರಮಟ್ಟದಲ್ಲಿ ಚಿನ್ನದ ಪದಕ ಪಡೆದವರು. 14ರ ವಯಸ್ಸಿನಲ್ಲಿ ಶೂಟಿಂಗ್ನಲ್ಲಿ ತೊಡಗಿಸಿಕೊಂಡು ನಿರಂತರ ತರಬೇತಿ ಪಡೆಯುತ್ತಾರೆ. ರಾತ್ರಿ ಹಗಲೆನ್ನದೇ ಸತತ ಪರಿಶ್ರಮ, ಅಚಲ ಶ್ರದ್ಧೆ ಮನುವನ್ನು ಸಾಧಕರ ಸಾಲಿನಲ್ಲಿ ಸೇರಿಸುತ್ತದೆ.




**ಗೆಲುವಿನ ರಾಯಭಾರಿ:** ತನ್ನ ಜೀವನದಲ್ಲಿ ಅನೇಕ ಸ್ಪರ್ಧೆಗಳಿಗೆ ಎದೆಯೊಡ್ಡಿರುವ ಸೋನು ಪ್ರತಿಬಾರಿ ಗೆದ್ದದ್ದೇ ಹೊರತು ಸೋತವರಲ್ಲ. 2017ರಲ್ಲಿ ನ್ಯಾಷನಲ್ ಶೂಟಿಂಗ್ ಚಾಂಪಿಯನ್ಶಿಪ್‌ನಲ್ಲಿ ಒಲಂಪಿಕ್ಸ್ ಮಾಜಿ 'ನಂಬರ್–1' ಶೂಟರ್ ಹೀನಾ ಸಿಧುವನ್ನು ಸೋಲಿಸುವ ಮೂಲಕ ಪ್ರಸಿದ್ಧಿಯನ್ನು ಪಡೆಯುತ್ತಾರೆ. 2018ರ ಕಾಮನ್ವೆಲ್ತ್ ಗೇಮ್ಸ್ ನಲ್ಲಿ 16 ವರ್ಷದ ಹುಡುಗಿಯೊಬ್ಬಳು ಚಿನ್ನದ ಪದಕ ಪಡೆದು ಬಾರಿ ಸದ್ದು ಮಾಡಿದ್ದಳು ಅದು ಬೇರಾರು ಅಲ್ಲ ಮನು ಬಾಕರ್. 2018ರ ಐಎಸ್ಎಸ್ಎಫ್ ಇಂಟರ್ನ್ಯಾಷನಲ್ ಶೂಟಿಂಗ್ ಸ್ಪೋರ್ಟ್ಸ್ ಫೆಡರೇಶನ್ ವರ್ಲ್ಡ್‌ಕಪ್‌ನಲ್ಲಿ ಶೂಟಿಂಗ್ ದಿಗ್ಗಜರನ್ನು ಮಣಿಸಿ ಸ್ವರ್ಣ ಪದಕವನ್ನು ಮುಡಿಗೇರಿಸಿಕೊಳ್ಳುತ್ತಾರೆ. ಈ ಮೂಲಕ ಒಲಿಂಪಿಕ್ಸ್ ನಲ್ಲಿ ಭಾಗವಹಿಸಲು ಅರ್ಹತೆ ಪಡೆಯುತ್ತಾರೆ.

**ಮನು ಬಾಕರ್ ಸಾಧನೆಗೆ ಭಗವದ್ಗೀತೆಯೇ ಪ್ರೇರಣೆ:** 2020ರ ಟೋಕಿಯೋ ಒಲಿಂಪಿಕ್ಸ್ ನಲ್ಲಿ ಮೂರು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದ ಮನು ತನ್ನ ಗನ್ ಕೈಕೊಟ್ಟದ್ದರಿಂದ ಸತತ ಸೋಲನ್ನು ಅನುಭವಿಸುತ್ತಾರೆ. ಈ ಸೋಲು ಇವರಿಗೆ ತೀವ್ರ ನೋವನ್ನುಂಟುಮಾಡುತ್ತದೆ. ಆ ಸಂದರ್ಭದಲ್ಲಿ ಇವರ ನೆರವಿಗೆ ಬಂದದ್ದು ನಮ್ಮ ಪವಿತ್ರಗ್ರಂಥ ಭಗವದ್ಗೀತೆ. ನಿನ್ನ ಕಾರ್ಯವನ್ನು ನೀನು ಮಾಡು ಕರ್ಮಫಲವನ್ನು ಭಗವಂತನಿಗೆ ಬಿಡು ಎಂಬ ಶ್ರೀ ಕೃಷ್ಣನ ಮಾತಿನಿಂದ ಪ್ರೇರಣೆ ಪಡೆದ ಮನು ಇಂದು ಒಲಿಂಪಿಕ್ಸ್ ಶೂಟಿಂಗ್ ಸ್ಪರ್ಧೆಯಲ್ಲಿ ಮೆಡಲ್ ಪಡೆದ ಮೊದಲ ಭಾರತೀಯ ಮಹಿಳೆ. ಅಲ್ಲದೆ ಒಂದೇ ಒಲಿಂಪಿಕ್ಸ್ ನಲ್ಲಿ ಎರಡು ಪದಕವನ್ನು ಮುತ್ತಿಕ್ಕಿದ ಮೊದಲ ಮಹಿಳೆಯೂ ಹೌದು.

### 22 ವಯಸ್ಸಿನಲ್ಲಿ 24 ಮೆಡಲ್


ಮನುವಿನ ಸಾಧನೆಯ ಪಟ್ಟಿಯನ್ನು ನೋಡಿದರೆ ಮೆಡಲ್‌ಗಳ ಸುರಿಮಳೆ ಆಕೆಯ ಕೊರಳನ್ನು ಅಲಂಕರಿಸಿದೆ. ವರ್ಲ್ಡ್ ಚಾಂಪಿಯನ್ಶಿಪ್‌ನಲ್ಲಿ ಒಂದು ಚಿನ್ನ ಒಂದು ಬೆಳ್ಳಿ, ಏಷ್ಯನ್ ಗೇಮ್ಸ್‌ನಲ್ಲಿ ಒಂದು ಚಿನ್ನ, ವರ್ಲ್ಡ್‌ಕಪ್‌ನಲ್ಲಿ 9 ಚಿನ್ನ ಎರಡು ಬೆಳ್ಳಿ, ಯೂಥ್ ಒಲಿಂಪಿಕ್ಸ್‌ನಲ್ಲಿ ಒಂದು ಚಿನ್ನ ಒಂದು ಬೆಳ್ಳಿ, ಐಎಸ್‌ಎಸ್‌ಎಫ್‌ನಲ್ಲಿ ಚಾಂಪಿಯನ್ಶಿಪ್‌ನಲ್ಲಿ 4 ಚಿನ್ನ ಒಂದು ಕಂಚು, ಕಾಮನ್ವೆಲ್ತ್ ಗೇಮ್ಸ್‌ನಲ್ಲಿ ಒಂದು ಚಿನ್ನ, ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಎರಡು ಕಂಚು ಒಟ್ಟು 17 ಚಿನ್ನ ನಾಲ್ಕು ಬೆಳ್ಳಿ ಮೂರು ಕಂಚು ಅಂದರೆ 22ನೇ ವಯಸ್ಸಿನಲ್ಲಿಯೇ 24ಕ್ಕೂ ಅಧಿಕ ರಾಷ್ಟ್ರೀಯ ಅಂತರಾಷ್ಟ್ರೀಯ ಪದಕಗಳನ್ನು ಬಾಚಿಕೊಂಡಿದ್ದಾರೆ. ಇದಲ್ಲದೆ ಭಾರತದ ಖ್ಯಾತ ಅರ್ಜುನ ಪ್ರಶಸ್ತಿಯನ್ನು ಪಡೆದಿದ್ದಾರೆ. ಇಷ್ಟು ಸಣ್ಣ ವಯಸ್ಸಿನಲ್ಲಿ ಇವರು ಕ್ರೀಡಾ ಕ್ಷೇತ್ರದಲ್ಲಿ ಮಾಡಿರುವ ಸಾಧನೆ ಭಾರತದ ಮೂಲೆ ಮೂಲೆಗಳಲ್ಲೂ ಇರುವ ಪ್ರತಿಯೊಬ್ಬ ಉತ್ಸಾಹಿ ಯುವ ಭಾರತೀಯನಿಗೂ ಪ್ರೇರಣೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th AUGUST 2024
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 15-08-2024



1ನೇ ಪುಟದಿಂದ...





ಬದುಕಿರುತ್ತವೆಯೋ, ಹಾಗೆಯೇ ಗೃಹಸ್ಥನನ್ನು ಆಶ್ರಯಿಸಿಕೊಂಡು ಎಲ್ಲ ಆಶ್ರಮಗಳೂ ಇರುತ್ತವೆ. 'ಧನ್ಯೋ ಗೃಹಸ್ಥಾಶ್ರಮಃ' ಎಂಬುದೂ ಸುಪ್ರಸಿದ್ಧ ಉಕ್ತಿ. ಇವೆಲ್ಲವೂ ಗೃಹಸ್ಥ ಹಾಗೂ ಗೃಹ (ಕುಟುಂಬ)ದ ಮಹತ್ವವನ್ನು ತಿಳಿಸುತ್ತವೆ. ನಮ್ಮ ಸನಾತನ ಧರ್ಮ-ಸಂಸ್ಕೃತಿಯ ಮೌಲ್ಯಗಳು, ಗುಣಗಳನ್ನು ಕುಟುಂಬ ಜೀವನದಲ್ಲಿಯೇ ನೋಡುತ್ತೇವೆ. ಪ್ರತಿ ಕುಟುಂಬದ ಗುಣನಡತೆಗಳು ಹಾಗೂ ಮೌಲ್ಯಗಳು ಅಲ್ಲಿನ ಸಮಾಜ ಜೀವನದಲ್ಲಿ ಅಭಿವ್ಯಕ್ತಗೊಳ್ಳುತ್ತವೆ. ಮನೆಯಲ್ಲಿ ಭಜನ್-ಭೋಜನ್-ಭಾಷಾ-ಭೂಷಾ-ಭ್ರಮಣ್-ಭವನ್ – ಮೊದಲಾದ ಸಂಗತಿಗಳ ಬಗ್ಗೆ ಗಮನ ನೀಡಬೇಕು. ಕುಟುಂಬ ಸದಸ್ಯರು ಸಮಾಜದಲ್ಲಿ ವಿವಿಧ ಪಾತ್ರಗಳನ್ನು ನಿರ್ವಹಿಸುವವರೇ ಆದ್ದರಿಂದ ಕುಟುಂಬಗಳು ಸದೃಢವಾದರೆ ಸಮಾಜವೂ ಸದೃಢವಾಗುತ್ತದೆ. ಕುಟುಂಬ ವ್ಯವಸ್ಥೆ ಭಾರತದ ಸಾಮಾಜಿಕ ಜೀವನದ ಅಡಿಗಲ್ಲು. ಹಾಗಾಗಿ ಬಲಿಷ್ಠ ಕುಟುಂಬಗಳ ಮೂಲಕ ಬಲಿಷ್ಠ ರಾಷ್ಟ್ರ ನಿರ್ಮಾಣದ ಆಶಯವೇ ಕುಟುಂಬ ಪ್ರಬೋಧನ್ ಕಾರ್ಯದ ಧ್ಯೇಯ.

**3. ಸಾಮಾಜಿಕ ಸಮರಸತೆ:** ಹಿಂದೂ ಸಮಾಜದ ಒಳಗಡೆ ಇರುವ ವಿವಿಧ ಜಾತಿ ಪಂಗಡಗಳ ಮಧ್ಯೆ ಸಾಮರಸ್ಯ, ಸಮಾಜದ ಎಲ್ಲ ಬಂಧುಗಳಲ್ಲಿ ಬಂಧುತ್ವ, ಪರಸ್ಪರ ಪೂರಕ ಹಾಗೂ ಸಹಕಾರೀ ಮನೋಭಾವವನ್ನು ಮೂಡಿಸುತ್ತಾ ಸ್ವಸ್ಥ-ಸುಂದರ-ಸಬಲ-ಸಮರಸ ಸಮಾಜ ನಿರ್ಮಾಣ ಮಾಡುವುದೇ ಸಾಮಾಜಿಕ ಸಮರಸತೆಯ ಕಾರ್ಯದ ಮೂಲೋದ್ದೇಶ. ನಮ್ಮ ಮಾತೃಸಮಾಜದ




ಎಲ್ಲ ಬಂಧುಗಳಲ್ಲಿ ಪರಸ್ಪರ ಸಮರಸತೆಯ ಭಾವವನ್ನು ಜಾಗೃತಗೊಳಿಸಿ, ವಿವಿಧತೆಯಲ್ಲಿನ ಏಕತೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಸಹೋದರತ್ವ, ಸಮಾನತೆ, ಸಾಮಾಜಿಕ ನ್ಯಾಯ ಇತ್ಯಾದಿ ಆಶಯಗಳನ್ನು ನಿರಂತರವಾಗಿ ಪೋಷಿಸುವ ಅಗತ್ಯವಿದೆ. ಸಮಾಜದ ಎಲ್ಲರನ್ನೂ ಒಗ್ಗೂಡಿಸುವ, ಎಲ್ಲರ ಮನಸ್ಸುಗಳನ್ನು ಒಂದುಗೂಡಿಸುವ, ಒಬ್ಬರಿಗೊಬ್ಬರು ಪರಸ್ಪರ ಪೂರಕವಾಗಿ ಯೋಚಿಸುತ್ತಾ ಹಾಗೂ ಸಮತೆ ಮತ್ತು ಸಮಾನತೆಯಿಂದ ನಡೆದುಕೊಳ್ಳುವುದೇ ಸಾಮರಸ್ಯ. ಈ ಮಾನಸಿಕತೆ ಇಡೀ ಸಮಾಜದಲ್ಲಿ ಉಂಟಾದಾಗ ಆಗ ಅದು ಸಂಪೂರ್ಣ ಸಾಮರಸ್ಯದ ಸಮಾಜವಾಗುತ್ತದೆ. ಸಮಾಜದ ವ್ಯವಸ್ಥೆಯಲ್ಲಿ ಅನೇಕರು ವಿವಿಧ ಭಾಷೆ, ಪಂಥ, ಜಾತಿ, ಪ್ರದೇಶ, ಕಸುಬುಗಳಿಂದ, ಬೇರೆ ಬೇರೆ ಆಚಾರ-ವಿಚಾರಗಳ ಹಿನ್ನೆಲೆಯಿಂದ ಬಂದವರಿರುತ್ತಾರೆ. ಎಲ್ಲರ ಭಾವನೆಗಳಿಗೆ ಪರಸ್ಪರ ಗೌರವ ನೀಡಿ, ಎಲ್ಲರನ್ನೂ ಪ್ರೀತಿಯಿಂದ ಕಾಣುವ, ಎಲ್ಲರನ್ನೂ ಒಂದುಗೂಡಿಸುವ ಯೋಚನೆ ಮಾಡುವುದೇ ಸಾಮರಸ್ಯ. ನನ್ನಂತೆಯೇ ಇನ್ನೊಬ್ಬ, ಅವನ ಹಾಗೆ ನಾನು ಇದ್ದೇನೆ ಎಂದು ಪರಸ್ಪರ ಪೂರಕವಾಗಿ ಯೋಚಿಸುವುದೇ ಸಮರಸತೆಯ ಮಾನಸಿಕತೆ. ವಿವಿಧತೆಯನ್ನೇ ಒಂದು ವಿಶೇಷತೆಯಾಗಿರಿಸಿಕೊಂಡಂತಹ ನಮ್ಮ ದೇಶಕ್ಕೆ ಆ ಎಲ್ಲಾ ವಿವಿಧತೆಗಳ ಮಧ್ಯೆ ಒಂದು ಏಕತೆಯನ್ನು ಸಾಧಿಸಲು ಬೇಕಾಗಿರುವುದೇ ಸಮರಸತೆಯ ಪರಿಕಲ್ಪನೆ. ಸಮಾಜದಲ್ಲಿ ಸಂವೇದನಾಶೀಲತೆ ಇದ್ದಷ್ಟೂ ಸಮರಸತೆಯ ಭಾವ ಹೆಚ್ಚಾಗುತ್ತದೆ. ಸಾಮಾಜಿಕ ನ್ಯಾಯ ಎಲ್ಲರಿಗೂ ಸಿಗುತ್ತದೆ. ಸಮಾಜದ ಆಂತರಿಕ ಸಮಸ್ಯೆಗಳನ್ನು ನಿವಾರಿಸಲು, ಬಾಹ್ಯ ಸವಾಲುಗಳನ್ನು ಎದುರಿಸಲು ಸಮರಸತೆ ಎಲ್ಲೆಡೆಯೂ ಮೂಡಿಬರಬೇಕು. ಇದಕ್ಕೆ ಬೇಕಾದ ಪೂರಕ ವಾತಾವರಣವನ್ನು ಒದಗಿಸಿಕೊಡುವಂತದ್ದು ಎಲ್ಲರ ಸಾಮಾಜಿಕ ಕರ್ತವ್ಯ.

**4. ಸ್ವದೇಶಿ ಜೀವನಶೈಲಿ:** ಸ್ವ-ಅಂದರೆ ತನ್ನತನ (Selfhood). ಸ್ವಭಾಷೆ, ಸ್ವಭೂಷಾ, ಸ್ವದೇಶಿ, ಸ್ವರಾಷ್ಟ್ರ, ಸ್ವರಾಜ್ಯ, ಸ್ವತಂತ್ರ, ಸ್ವಧರ್ಮ- ಎಲ್ಲದರಲ್ಲೂ ತನ್ನತನವಿದೆ. ಆ ತನ್ನತನವು ನಿತ್ಯಜೀವನದಲ್ಲಿ ಅಭಿವ್ಯಕ್ತವಾಗಬೇಕು. ಜನರಲ್ಲಿ ಸ್ವದೇಶಿ ಭಾವಜಾಗರಣ ಮೂಡಿಸಿ ಸಂಪೂರ್ಣ ಸ್ವಾವಲಂಬಿ ಸಮಾಜ ನಿರ್ಮಾಣಕ್ಕೆ ಒತ್ತು ನೀಡುವ ಮೂಲಕ ಭಾರತವನ್ನು ಸಬಲ ರಾಷ್ಟ್ರವನ್ನಾಗಿ ಮಾಡಲು ಹಾಗೂ ಅದಕ್ಕೆ ಪೂರಕವಾಗಿ ಜನರಲ್ಲಿ ಸ್ವದೇಶಿ ಮಾನಸಿಕತೆಯನ್ನು




ಬಲಗೊಳಿಸಿ, ವೈಚಾರಿಕ ಜಾಗೃತಿಯನ್ನು ಮೂಡಿಸುವುದು ಒಂದು ಪ್ರಮುಖ ಕಾರ್ಯ. ಸಮಾಜದಲ್ಲಿ ಸ್ವದೇಶಿ ಭಾವದ ಜಾಗರಣೆ ಹಾಗೂ ವಿದೇಶಿ ಬೆಂಬಲಿತ ಜಾಗತಿಕ ಮಾರುಕಟ್ಟೆ ಶಕ್ತಿ (Global Marketing Forces)ಗಳ ಆರ್ಥಿಕ ಆಕ್ರಮಣ ಮತ್ತು ಅವುಗಳ ಷಡ್ಯಂತ್ರಗಳ ಕುರಿತು ಎಚ್ಚರ, ಭಾರತೀಯ ಸಾಂಸ್ಕೃತಿಕ ಮೌಲ್ಯಗಳನ್ನು ಪೋಷಿಸುವುದು, ಸಂಪೂರ್ಣ ಸ್ವಾವಲಂಬಿ ಸಮಾಜ ನಿರ್ಮಾಣಕ್ಕೆ ಒತ್ತು ನೀಡುವುದು, ಭಾರತದ ರಾಷ್ಟ್ರೀಯ ಸಂಪತ್ತಿನ ಸಂರಕ್ಷಣೆ, ದೇಶದ ಎಲ್ಲಾ ಪ್ರದೇಶಗಳಲ್ಲಿ ಸಮತೋಲಿತವಾಗಿ ಅಭಿವೃದ್ಧಿಯಾಗುವ ಮೂಲಕ ಸಮಗ್ರ ಸ್ವಾವಲಂಬಿ ಸಮಾಜ ನಿರ್ಮಾಣ ಮಾಡುವುದು, ಸ್ವದೇಶಿ ವಸ್ತುಗಳ ಬಳಕೆಗೆ ಆದ್ಯತೆ, ಸ್ವದೇಶಿ ಭಾವಜಾಗರಣದೊಂದಿಗೆ ಭಾರತವನ್ನು ಅಭಿವೃದ್ಧಿಶೀಲ ಹಾಗೂ ಆರ್ಥಿಕವಾಗಿ ಸಬಲ ರಾಷ್ಟ್ರವನ್ನಾಗಿ ಮಾಡುವುದು, ಈ ವಿಚಾರಗಳ ಕುರಿತಾದ ಚರ್ಚೆ, ಸಹಭಾಗಿತ್ವ ಮತ್ತು ಸಹಕಾರ ನೀಡುವುದು, ಭಾರತೀಯ ಚಿಂತನೆ ಆಧಾರಿತ ದೈನಂದಿನ ಬದುಕು – ಇವು ಸ್ವದೇಶಿ ಜೀವನಶೈಲಿ ಕುರಿತ ಕಾರ್ಯದ ಧ್ಯೇಯ. "ಸ್ವಾಭಿಮಾನ ಹಾಗೂ ಸ್ವಾವಲಂಬನೆ ಪರಸ್ಪರ ಪೂರಕವಾದ ಅಂಶಗಳು. ಒಂದು ದೇಶದ ಜನಗಳಿಗೆ ತಮ್ಮ ದೇಶದ ಬಗ್ಗೆ ತಮ್ಮ ದೇಶದಲ್ಲಿ ತಮ್ಮವರೇ ಉತ್ಪಾದಿಸುವ ಆಹಾರ, ಬಟ್ಟೆ, ಔಷಧಿ, ಯಂತ್ರೋಪಕರಣಗಳು ಹಾಗೂ ಇತರ ಸೇವೆಗಳ ಬಗ್ಗೆ ಹೆಮ್ಮೆ ಇರಬೇಕು. ನಮ್ಮ ಕೃಷಿ, ಕೈಗಾರಿಕೆಗಳ ಬಗ್ಗೆ ಅಭಿಮಾನವಿರಬೇಕು. ಹೀಗೆ ಸ್ವಾಭಿಮಾನದಿಂದ ಸ್ವಾವಲಂಬನೆ ಹಾಗೂ ಸ್ವಾವಲಂಬನೆಯಿಂದ ಸ್ವಾಭಿಮಾನ – ಪರಸ್ಪರ ಪೂರಕವಾಗಿ ಕೆಲಸ ಮಾಡುತ್ತಾ ಆತ್ಮನಿರ್ಭರ ಭಾರತದ ನಿರ್ಮಾಣ ಮಾಡಬೇಕಿದೆ." ಎನ್ನುತ್ತಾರೆ ಸ್ವದೇಶೀ ಜಾಗರಣ್ ಮಂಚ್‌ನ ಪ್ರೊ. ಬಿ.ಎಂ. ಕುಮಾರಸ್ವಾಮಿ.

**5. ನಾಗರಿಕ ಕರ್ತವ್ಯ:** ರಾಷ್ಟ್ರ ಎಂದರೆ ಪ್ರಜೆಗಳು (People are the Nation) ಎಂಬ ಪ್ರಸಿದ್ಧ ಮಾತೊಂದಿದೆ. ಪ್ರತಿಯೊಬ್ಬ ಪ್ರಜೆಯೂ ತನ್ನ ರಾಷ್ಟ್ರ- ಸಮಾಜದ ಶ್ರೇಯಸ್ಸಿಗೆ ಕೊಡುಗೆ ನೀಡಿದರೇನೇ ಆ ರಾಷ್ಟ್ರ- ಸಮಾಜದ ಉನ್ನತಿ ಸಾಧ್ಯ. ಹಾಗಾಗಿ ಪ್ರತಿಯೋರ್ವ




ನಾಗರಿಕನೂ ಸಮಾಜ ಜೀವನದಲ್ಲಿ ಮಾಡಬೇಕಾದ ಹಲವಾರು ಕರ್ತವ್ಯಗಳಿವೆ. ಆ ರೀತಿಯ ನಾಗರಿಕ ಪ್ರಜ್ಞೆ (Civic Sense)ಯನ್ನು ಪರಸ್ಪರ ನಾಗರಿಕ ಸಮಾಜವೇ ಕಟ್ಟಿನಿಲ್ಲಿಸಿ ಪೋಷಿಸುತ್ತದೆ. ಹಾಗಾಗಿ ನಾಗರಿಕನಾಗಿ ತಾನೇನು ಮಾಡಬೇಕು? ತಾನೇನು ಮಾಡಬಾರದು ಎಂಬುದರ ಅರಿವು ಸದಾ ಇರಬೇಕು. ಉದಾಹರಣೆಗೆ: ರಾಷ್ಟ್ರೀಯ ಪ್ರತೀಕಗಳ ಸಮ್ಮಾನ, ರಾಷ್ಟ್ರಧ್ವಜ, ರಾಷ್ಟ್ರಗೀತೆ, ರಾಷ್ಟ್ರೀಯ ಹಾಡು ಇತ್ಯಾದಿಗಳಿಗೆ ಸೂಕ್ತ ಗೌರವ ಕೊಡುವುದು. ರಾಷ್ಟ್ರೀಯ ಸಂಪತ್ತುಗಳನ್ನು ರಕ್ಷಿಸುವುದು. ಮತದಾನ ಮಾಡುವುದು, ಸಾರ್ವಜನಿಕ ಸ್ವತ್ತುಗಳ ಸಂರಕ್ಷಣೆಯ ಕರ್ತವ್ಯಭಾವ ಹೊಂದಿರುವುದು, ರಸ್ತೆ / ಬೀದಿದೀಪ / ನಲ್ಲಿ ನೀರು / ನಾಮಫಲಕಗಳು ಇತ್ಯಾದಿಗಳ ಸಂರಕ್ಷಣೆಯ ಸ್ವಭಾವ, ಎಲ್ಲರಿಗೂ ಗೌರವ ನೀಡುವ ಸ್ವಭಾವ. (Dignity For All), ಪಂಕ್ತಿ (Queue) ಸಾಲಲ್ಲಿ ನಿಲ್ಲುವ ಸ್ವಭಾವ ರೂಢಿಸುವುದು, ವಾಣಿವಿವೇಕ- ಎಲ್ಲಿ, ಯಾವಾಗ, ಹೇಗೆ ಮಾತನಾಡಬೇಕು ಎನ್ನುವ ಅರಿವು, ಕೃತಿವಿವೇಕ- ಯಾವ ಕೆಲಸ, ಎಲ್ಲಿ, ಹೇಗೆ ಮಾಡಬೇಕು ಎಂಬ ವಿವೇಚನೆ, ಐತಿಹಾಸಿಕ, ಪಾರಂಪರಿಕ, ಧಾರ್ಮಿಕ ಸ್ಥಳಗಳ ಸಂರಕ್ಷಣೆ; ಅಲ್ಲಿ ಗೋಡೆ ಬರಹ ಇತ್ಯಾದಿ ಮಾಡಬಾರದು, ಟ್ರಾಫಿಕ್ ಸಿಗ್ನಲ್ ನಿಯಮಗಳು – ಎಲ್ಲಾ ರೀತಿಯ ಸಂಚಾರಿ ನಿಯಮಗಳ ಪಾಲನೆ, ಲಂಚವನ್ನು ಕೊಡಬಾರದು, ತೆಗೆದುಕೊಳ್ಳಬಾರದು. (No to Corruption), ಕಸವನ್ನು ಕಸದಬುಟ್ಟಿಯಲ್ಲೇ ಹಾಕಬೇಕು. ಎಲ್ಲೆಂದರಲ್ಲಿ ಬಿಸಾಡಬಾರದು, ನೋಟು (ಕರೆನ್ಸಿ) ನಮ್ಮ ರಾಷ್ಟ್ರೀಯ ಸಂಪತ್ತು. ಅದನ್ನು ಗಲೀಜು ಮಾಡುವುದು, ಹರಿಯುವುದು, ಅತಿಯಾಗಿ ಮಡಚುವುದು, ಅದರಲ್ಲಿ ಬರೆದು ಗೀಚುವುದು ಮಾಡಕೂಡದು – ಎಂಬಿತ್ಯಾದಿ ಅನೇಕ ಸಂಗತಿಗಳನ್ನು ನಮ್ಮ ದಿನನಿತ್ಯದ ಸಾರ್ವಜನಿಕ ಬದುಕಿನಲ್ಲಿ ರೂಢಿಸಬೇಕು. ಎಲ್ಲರೂ ನಾಗರಿಕ ಪ್ರಜ್ಞೆ-ಕರ್ತವ್ಯಭಾವದಿಂದ ವ್ಯವಹರಿಸಿದರೆ ನಮ್ಮ ಸಾಮಾಜಿಕ ಬದುಕು ನೆಮ್ಮದಿಯ ನೆಲೆಬೀಡಾಗುತ್ತದೆ.

ಪಂಚಪರಿವರ್ತನೆಯ ಈ ಎಲ್ಲಾ ಕಾರ್ಯಚಟುವಟಿಕೆಗಳಲ್ಲಿ ಸಂಘದ ಎಲ್ಲಾ ಕಾರ್ಯಕರ್ತರು, ಸ್ವಯಂಸೇವಕರು, ಎಲ್ಲಾ ಗತಿವಿಧಿ ಹಾಗೂ ವಿವಿಧ ಕ್ಷೇತ್ರ ಸಂಘಟನೆಗಳ ಕಾರ್ಯಕರ್ತರು, ಹಿತೈಷಿಗಳು, ಸಾರ್ವಜನಿಕರು ಸೇರಿದಂತೆ ಎಲ್ಲರ ಸಹಭಾಗಿತ್ವದೊಂದಿಗೆ ತಮ್ಮ ತಮ್ಮ ಕಾರ್ಯಕ್ಷೇತ್ರಗಳಲ್ಲಿ ಸಾಮಾಜಿಕ ಪರಿವರ್ತನೆ ತರಲು ಪ್ರಯತ್ನಶೀಲರಾಗಬೇಕಾಗಿದೆ. ಒಂದು ಪ್ರದೇಶದ ವಿವಿಧ ಸಾಮಾಜಿಕ ಸಂಸ್ಥೆಗಳು, ಸಂಘಟನೆಗಳು, ಸ್ಥಾನೀಯ ವೇದಿಕೆಗಳು, ಶಿಕ್ಷಣ ಸಂಸ್ಥೆಗಳು ಪರಸ್ಪರ ಸಹಭಾಗಿಗಳಾಗಿ ಪರಿವರ್ತನೆಯ ವಾಹಕರಾಗಲು ಶತಾಬ್ದಿಯ ಈ ಸಂದರ್ಭದಲ್ಲಿ ಕಾರ್ಯಪ್ರವೃತ್ತರಾಗಬೇಕಾಗಿದೆ.

■ ರಾಜೇಶ್ ಪದ್ಮಾರ್

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.